ಶ್ರೀ ಕೆ.ವಿಶ್ವೇಶ್ವರ ಹೆಗಡೆ:- ಮಾತನಾಡುವುದಕ್ಕೆ ನನ್ನದೇನೂ ಅಭ್ಯಂತರವಿಲ್ಲ. ಆದರೆ ನನ್ನ ಒಂದು ವಿನಂತಿ ಏನೆಂದರೆ, ನಾವು ವಿಷಯವನ್ನು ಸಮರ್ಪಕವಾಗಿ ಮಂಡಿಸದೇ ಹೋದರೆ, ಸರ್ಕಾರ ಉತ್ತರ ಹೇಳುವುದು ಹೇಗೆ? ಯಾವುದಕ್ಕೆ ವಿವರಣೆ ಕೊಡುತ್ತಾರೆ? ಯಾವುದಕ್ಕೆ ಸ್ಪಷ್ಟೀಕರಣ ಕೊಡುತ್ತಾರೆ? ಈ ಹಿನ್ನೆಲೆಯಲ್ಲಿ ತಾವು ಅವರಿಗೆ ಬೇಕಾದರೆ 2-5-10 ನಿಮಿಷ ಎಂದು ಸಮಯ ನಿಗದಿ ಮಾಡಿ. ಏಕೆಂದರೆ ಅವರು ಮಾಡಿರುವ ಸಾಧನೆಯೂ ಅಷ್ಟೇ.

ಛೇರ್ಮನ್:- ನಿಶ್ಚಿತವಾದ ಸಮಯದಲ್ಲಿ ಎಲ್ಲವೂ ಮುಗಿಯಲು ಸಾಧ್ಯವಿಲ್ಲ. 6.30ಕ್ಕೆ ಸದನವನ್ನು ಮುಗಿಸಿದರೆ ಏನು ಮಾಡಲು ಸಾಧ್ಯವಾಗುತ್ತದೆ? ಇನ್ನೂ ಡಿಮ್ಯಾಂಡ್ಸ್ ಮೇಲಿನ ಚರ್ಚೆಗೆ ರಿಪ್ಲೈ ಮಾಡಿಲ್ಲ. ಅದಕ್ಕೆ ಸಮಯ ನಿಗದಿ ಮಾಡಲಾಗಿದೆ.

(ಗೊಂದಲ)

ಛೇರ್ಮನ್:- ಅದು ಎಲ್ಲರ ಜವಾಬ್ದಾರಿ. ಸರ್ಕಾರಕ್ಕಷ್ಟೇ ಅಲ್ಲ, ವಿರೋಧ ಪಕ್ಷದವರ ಜವಾಬ್ದಾರಿಯೂ ಆಗಿದೆ. ಮಾನ್ಯ ಗೃಹ ಸಚಿವರೇ, ಈಗ ಏನು ಮಾಡುವುದು? 3 ಗಂಟೆಗೆ ಬೇಡಿಕೆಗಳ ಮೇಲಿನ ಚರ್ಚೆಗೆ ಉತ್ತರ ಎಂದು ಅಧ್ಯಕ್ಷರು ಹೇಳಿದ್ದಾರೆ. ಈಗ ಊಟಕ್ಕೆ ಬಿಡುವುದೋ ಅಥವಾ ಮುಂದುವರಿಸುವುದೋ?

ಶ್ರೀ ಮಲ್ಲಿಕಾರ್ಜುನ ಖರ್ಗೆ:- ಊಟಕ್ಕೆ ಬಿಡಿ.

ಛೇರ್ಮನ್(ಬಿ.ಆರ್.ಯಾವಗಲ್):- ಈಗ ಸದನವನ್ನು 3 ಗಂಟೆವರೆಗೆ ಮುಂದೂಡುತ್ತಿದ್ದೇನೆ.

(ಸದನವು ಮಧ್ಯಾಹ್ನ 2 ಗಂಟೆ 06 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನಃ ಮಧ್ಯಾಹ್ನ 3 ಗಂಟೆಗೆ ಸಭೆ ಸೇರಲು ತೀರ್ಮಾನಿಸಿತು)

(ಸದನವು 3 ಗಂಟೆ 20 ನಿಮಿಷಕ್ಕೆ ಪ್ರಾರಂಭವಾಯಿತು; ಸನ್ಮಾನ್ಯ ಉಪಾಧ್ಯಕ್ಷರು (ಶ್ರೀ ಮನೋಹರ ಹೆಚ್.ತಹಸೀಲ್ದಾರ್) ರವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಉಪಾಧ್ಯಕ್ಷರು:- ಈಗ ಒಂದು ಪ್ರಕಟಣೆ ಇದೆ.

5. ಪ್ರಕಟಣೆ

ಕರ್ನಾಟಕ ವಿಧಾನ ಮಂಡಲದ ಗ್ರಂಥಾಲಯ ಉಪ ಸಮಿತಿ ವತಿಯಿಂದ ಹೊರತರಲಾಗುತ್ತಿರುವ ಪ್ರತಿಭಾವಂತ ಸಂಸದೀಯ ಪಟುಗಳ ಪುಸ್ತಕ ಬಿಡುಗಡೆ ಸಮಾರಂಭವನ್ನು ಇಂದು ಸಂಜೆ 6-00 ಗಂಟೆಗೆ ವಿಧಾನ ಸೌಧದ ಸಮ್ಮೇಳನ ಸಭಾಂಗಣದಲ್ಲಿ ಹಮ್ಮಿಕ್ಕೊಂಡಿದ್ದು, ಸದರಿ ಸಮಾರಂಭದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳು ಹಾಗೂ ಇತರರು ಭಾಗವಹಿಸುತ್ತಿದ್ದು ತಾವುಗಳು ಈ ಸಮಾರಂಭಕ್ಕೆ ಹಾಜರಾಗಬೇಕೆಂದು ವಿನಂತಿಸುತ್ತೇನೆ.

6. ಅಧ್ಯಕ್ಷರ ಅಪ್ಪಣೆ ಮೇರೆಗೆ

ವಿಷಯ:- ಹಿರಿಯೂರು ತಾಲ್ಲೂಕಿನಲ್ಲಿ ಶಾಖೋತ್ಪನ್ನ ವಿದ್ಯುತ್ ಉತ್ಪಾದನಾ ಕೇಂದ್ರಕ್ಕೆ ಪರವಾನಿಗಿಯನ್ನು ನೀಡಿರುವ ಬಗ್ಗೆ ನಡೆದ ಪ್ರತಿಭಟನೆ ಸಂದರ್ಭದಲ್ಲಿ ಗೋಲಿಬಾರ್‌ನಿಂದ ನಾಲ್ಕು ಜನರು ಸತ್ತಿರುವ ಬಗ್ಗೆ.

ಶ್ರೀ ಪಿ.ಜಿ.ಆರ್.ಸಿಂಧ್ಯ (ಕನಕಪುರ):- ಮಾನ್ಯ ಉಪಾಧ್ಯಕ್ಷರೆ, ಇವತ್ತು ಬಹಳ ಹೃದಯ ವಿದ್ರಾವಕವಾಗಿರತಕ್ಕಂಥ ಘಟನೆ ನಡೆದಿರುವುದರ ಬಗ್ಗೆ ಈ ಸರ್ಕಾರದ ವೈಫಲ್ಯತೆಯನ್ನು ಎತ್ತಿ ಹಿಡಿಯತಕ್ಕಂಥ ಪೋಲೀಸ್ ಇಲಾಖೆಯ ರಾಕ್ಷಸೀ ಕೃತ್ಯವನ್ನು ನಾನು ಮನಗಂಡಿದ್ದೇನೆ.

ಮಾನ್ಯ ಗೃಹ ಸಚಿವರು ಸದನದಲ್ಲಿ ಇದ್ದಾರೆ. ಸುಮಾರು 2-3 ತಿಂಗಳುಗಳ ಹಿಂದೆ ಈ ಸರ್ಕಾರದವರು, ಹಿರಿಯೂರು ತಾಲ್ಲೂಕಿನಲ್ಲಿ ಒಂದು ಶಾಖೋತ್ಪನ್ನ ವಿದ್ಯುತ್ ಉತ್ಪಾದನಾ ಕೇಂದ್ರಕ್ಕೆ ಪರವಾನಗಿಯನ್ನು ಕೊಟ್ಟಿದ್ದಾರೆ, ಅಲ್ಲಿನ ರೈತರು, ಪರಿಸರವಾದಿಗಳು, ಸಾರ್ವಜನಿಕರು, ಬಹಳ ದೊಡ್ಡ ಪ್ರಮಾಣದಲ್ಲಿ ಕಳೆದ ಎರಡೂ ತಿಂಗಳುಗಳಿಂದಲೂ ಸಾರ್ವತ್ರಿಕವಾಗಿ ಪ್ರತಿಭಟನೆಯನ್ನು ಮಾಡಿಕೊಂಡು ಬಂದಿದ್ದಾರೆ. ಚುನಾಯಿತ ಪ್ರತಿನಿಧಿಗಳು ಸರ್ಕಾರಕ್ಕೆ ಮನವಿಯನ್ನು ಸಲ್ಲಿಸಿದ್ದಾರೆ. ನಾನೂ ಕೂಡ ಕಳೆದ ಒಂದು ವಾರದ ಹಿಂದೆ ಸನ್ಮಾನ್ಯ ಸಭಾಧಕ್ಷರನ್ನು ಈ ವಿಚಾರದಲ್ಲಿ ಸದನದಲ್ಲಿ ಪ್ರಸ್ತಾಪಿಸಬೇಕೆಂದು ಪರಿಪರಿಯಾಗಿ ಕೇಳಿಕೊಂಡಿದ್ದೆ. ದುರ್ದೈವದಿಂದಾಗಿ ನಾನು ಇಲ್ಲಿ ಪ್ರಸ್ತಾಪ ಮಾಡಲಿಕ್ಕೆ ಅವಕಾಶ ಸಿಕ್ಕಿರಲಿಲ್ಲ. ಗೃಹ ಇಲಾಖೆಯ ಬೇಡಿಕೆಯ ಮೇಲೆ ಆಕಸ್ಮಿಕವಾಗಿ ಅವಕಾಶ ಸಿಕ್ಕರೆ ಈ ವಿಚಾರವನ್ನು ಮಾತನಾಡಬೇಕೆನ್ನುವ ಉದ್ದೇಶವನ್ನು ಹೊಂದಿದ್ದೆ. ಆದರೆ ಈ ಮಧ್ಯೆ ಈ ದಿವಸದ ಮಧ್ಯಾಹ್ನ ಅಲ್ಲಿನ ಪರಿಸರವಾದಿಗಳು ಮತ್ತು ರೈತರು, ಈ ಒಂದು ಯೋಜನೆಯಿಂದ ಬಹಳ ತೊಂದರೆಯಾಗುತ್ತದೆ, ಇದನ್ನು ಬೇರೆ ಕಡೆಗೆ ವರ್ಗಾಯಿಸಿ, ಇದರ ಪರವಾನಗಿಯನ್ನು ಕೊಡಬಾರದು ಎಂದು ಚಳುವಳಿ ಮಾಡುತ್ತಿದ್ದಂಥ ಸಂದರ್ಭದಲ್ಲಿ, ಸತ್ಯಾಗ್ರಹವನ್ನು ನಿಗ್ರಹ ಮಾಡಲಿಕ್ಕೆ ಆಗದೇ ಪೋಲೀಸರ್ ವೈಫಲ್ಯವನ್ನು ಎತ್ತಿ ತೋರಿಸಿ, ಪೋಲೀಸರು ಗುಂಡಿಕ್ಕಿ ನಾಲ್ಕು ಜನರನ್ನು ಕೊಂದಿರತಕ್ಕಂಥಾದ್ದರ ಘಟನೆ ನನಗೆ ತಿಳಿದು ಬಂದಿದೆ. ಇದರ ಜೊತೆಗೆ ಹಲವಾರು ಜನಗಳಿಗೆ ಗಾಯಗಳಾಗಿದೆ ಎನ್ನುವುದನ್ನೂ ಕೂಡ ನಾನು ತಿಳಿದುಕೊಂಡಿದ್ದೇನೆ. ಪೋಲೀಸರಿಗೆ ಹಾಗೂ ಈ ಸರ್ಕಾರಕ್ಕೆ ಏನಾಗಿದೆ ಎಂಬುದು ನನಗೆ ಗೊತ್ತಾಗುತ್ತಿಲ್ಲ. ಮೊನ್ನೆ ರುಳಕಿಯಲ್ಲಿ ಗೋಲಿಬಾರ್ ಮಾಡಿದರು, ಪೋಲೀಸ್ ಇಲಾಖೆಯಲ್ಲಿದ್ದಂಥ ಸಬ್-ಇನ್ಸ್‌ಪೆಕ್ಟರ್‌ರವನ್ನು ಕೊಲೆ ಮಾಡಿರುವವರ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು ಎಂದು ಹೇಳಿದರೆ, ಅಂಥ ಜನಗಳ ಬಾಯಿಗೆ ಗುಂಡಿಕ್ಕಿ ಎಂಟು ಜನರನ್ನು ಕೊಂದರು. ಈಗ ಪುನಃ ಗೋಲಿಬಾರ್ ನಡೆದಿದೆ. ಸಾಮಾನ್ಯವಾಗಿ ನನಗೆ ಗೊತ್ತಿರುವ ಹಾಗೆ, ಸರ್ಕಾರಿ ಅಧಿಕಾರಿಗಳು, ಹೆಡ್ಸ್ ಆಫ್ ದಿ ಡಿಪಾರ್ಟ್‌ಮೆಂಟ್, ಡಿಸ್ಟ್ರಿಕ್ಟ್ಸ್ ಪೋಲೀಸ್‌ನವರು, ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್ ಇವರೆಲ್ಲ ಏನು ಮಾಡುತ್ತಾರೆಂದರೆ, ಅಧಿವೇಶನ ನಡೆಯುವ ಸಂದರ್ಭದಲ್ಲಿ ರಜೆ ಹಾಕಿದ್ದರೂ ವಾಪಸ್ ತೆಗೆದುಕೊಂಡು ಬಹಳ ಅಲರ್ಟ್ ಆಗಿರುತ್ತಾರೆ, ಏಕೆಂದರೆ, ಇಂಥವೆಲ್ಲಾ ಬಂದಾಗ ಟೀಕೆ ಮಾಡುತ್ತಾರೆಂದು ಬಹಳ ಅಲರ್ಟ್ ಆಗಿರುತ್ತಾರೆ. ಆದರೆ ಇವತ್ತು ನಮಗೆ ಏನಾಯಿತು ಎಂಬುದು ಅರ್ಥವಾಗುತ್ತಿಲ್ಲ. ಹಿರಿಯೂರಿನಲ್ಲಿ ನಡೆದ ಈ ರಾಕ್ಷಸಿ ಕೃತ್ಯಕ್ಕೆ ನಾವು ಖಂಡಿಸಬೇಕಾಗಿದೆ. ನಿರ್ವಾಹ ಇಲ್ಲದೆ ಈ ಸರ್ಕಾರ ಪೋಲೀಸ್ ಇಲಾಖೆಯ ಮೇಲೆ ಸಂಪೂರ್ಣವಾಗಿ ನಿಯಂತ್ರಣ ಕಳೆದುಕೊಂಡಿದೆ ಎಂಬುದನ್ನು ನಾನು ಹೇಳಲೇಬೇಕಾಗಿದೆ. ತಾವು ಇದನ್ನು ಪ್ರಸ್ತಾಪಿಸುವುದಕ್ಕೆ ನಮಗೆ ಅವಕಾಶ ಮಾಡಿಕೊಟ್ಟಿದ್ದೀರಿ, ಮಾನ್ಯ ಗೃಹ ಸಚಿವರು ಇದರ ಬಗ್ಗೆ ದೀರ್ಘವಾದ ಹೇಳಿಕೆಯನ್ನು ಕೊಡುವುದರ ಜೊತೆಗೆ, ಇದರ ಬಗ್ಗೆ ಸಮಂಜಸವಾದ ಪರಿಹಾರ ಇದೆಯೇ? ನೀವು ಪೋಲೀಸರಿಗೆ ಗುಂಡಿಕ್ಕಿ ಗೊಲ್ಲುವುದಕ್ಕೆ ಲೈಸನ್ಸ್ ಕೊಟ್ಟಿದ್ದೀರಾ? ತಾವು ದಯಮಾಡಿ ನಮಗೆ ತಿಳಿಸಬೇಕಾಗುತ್ತದೆ. ಇದರ ಬಗ್ಗೆ ಮಾನ್ಯ ಗೃಹ ಸಚಿವರಿಗೆ ಮಾಹಿತಿ ಬಂದಿರಬಹುದು, ಎಷ್ಟು ಜನ ಸತ್ತಿದ್ದಾರೆ? ಎಷ್ಟು ಜನ ಆಸ್ಪತ್ರೆಯಲ್ಲಿ ಇದ್ದಾರೆ? ಬಹಳ ಮುಖ್ಯವಾಗಿ ನೀವು ಈಗ ತಕ್ಷಣ ಆ ಲೈಸನ್ಸ್‌ನ್ನು ರದ್ದು ಮಾಡದೇ ಹೋದರೆ ಬಹಳ ತೊಂದರೆಯಾಗುತ್ತದೆ. ಹೊರ ರಾಜ್ಯದಿಂದ ಬಂದಿರತಕ್ಕಂಥವರಿಗೆ ನೀವು ಲೈಸನ್ಸ್ ನೀಡಿದ್ದೀರಿ; ಮಾನ್ಯ ಉಪಾಧ್ಯಕ್ಷರೆ, ಅದು

ವಿಶೇಷವಾದ ಯೋಜನೆ. ನ್ಯಾಫ್ತ್ ಬೇಸ್ಡ್ ಅಥವಾ ಕೋಲ್ ಬೇಸ್ಡ್ ಪವರ ಪ್ರಾಜೆಕ್ಟ್ ಅಲ್ಲ ಅದು ಅಲ್ಲಿರುವ ಮರಗಿಡಗಳನ್ನು ಕಡಿದು ಅದರ ಮೂಲಕ ವಿದ್ಯುತ್ ಉತ್ಪಾದನೆ ಮಾಡುವ ಯೋಜನೆ, ಆ ಯೋಜನೆಗೆ ಪರವಾನಿಗೆ ಏಕೆ ಕೊಟ್ಟರು? ಯಾವ ಆಧಾರದ ಮೇಲೆ ಕೊಟ್ಟರು? ಅದನ್ನು ತತ್‌ಕ್ಷಣ ರದ್ದು ಮಾಡದೇ ಹೋದರೆ ಇನ್ನು ದೊಡ್ಡದಾಗಿ ಈ ಚಳುವಳಿ ಆರಂಭವಾಗುತ್ತದೆ ಎನ್ನುವುದನ್ನು ಸಹಿತ ನಾನು ಈ ಸರ್ಕಾರಕ್ಕೆ ತಿಳಿಸಲಿಕ್ಕೆ ಬಯಸುತ್ತೇನೆ. ಮಾನ್ಯ ಗೃಹ ಸಚಿವರಿಗೆ ಈ ಬಗ್ಗೆ ನೋವು ಇದೆ ಎಂಬುದನ್ನು ನಾನು ಅರ್ಥ ಮಾಡಿಕೊಂಡಿದ್ದೇನೆ. ಅವರ ಕಾಲದಲ್ಲಿ ಇವೆಲ್ಲವೂ ಆಗುತ್ತಿರುವುದರಿಂದ ಅವರಿಗೆ ಸಂತೋಷ ತಂದಿದೆ ಎಂದು ನಾನು ಹೇಳುವುದಿಲ್ಲ. ಆದರೆ ಎಲ್ಲೋ ಒಂದು ಕಡೆ ನೀವು ಎಡವಿದ್ದೀರಿ? ಅದನ್ನು ತಾವು ಸರಿ ಮಾಡಿಕೊಳ್ಳಬೇಕಾಗುತ್ತದೆ ಹಾಗೂ ಆ ಬಗ್ಗೆ ಯೋಚನೆ ಮಾಡಿಕೊಳ್ಳಬೇಕಾಗುತ್ತದೆ. ಎಸ್‌ಪಿ ಆ ಸ್ಥಳದಲ್ಲಿ ಇದ್ದರಾ? ಅವರಿಗೆ ಅಜಿಟೇಷನ್ ಮಾಡುವುದು ಗೊತ್ತಿಲ್ಲವೇ? ಪೋಲೀಸ್‌ನವರು ಏನು ಕ್ರಮ ಕೈಗೊಂಡಿದ್ದರು? ಇದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದಾರೆ? ದಯಮಾಡಿ ಮಾನ್ಯ ಗೃಹ ಸಚಿವರು ಈ ಬಗ್ಗೆ ತಿಳಿಸಬೇಕೆಂದು ನಾನು ಆಗ್ರಹ ಪಡಿಸುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್(ವಿರೋಧ ಪಕ್ಷದ ನಾಯಕರು):- ಮಾನ್ಯ ಉಪಾಧ್ಯಕ್ಷರೆ, ಹಿರಿಯೂರಿನಲ್ಲಿ ನಡೆದ ಘಟನೆಯ ಬಗ್ಗೆ ನನಗೂ ಮಾಹಿತಿ ಬಂತು. ಅಲ್ಲಿ ರೈತರು, ಪರಿಸರವಾದಿಗಳು ಚಳುವಳಿ ಮಾಡುತ್ತಿರುವ ಸಂದರ್ಭದಲ್ಲಿ ನಡೆದ ಗೋಲಿಬಾರ್‌ನಿಂದಾಗಿ ನಾಲ್ಕು ಜನ ಸತ್ತರು ಎನ್ನುವ ಸುದ್ದಿ ಬಂತು, ಆದರೆ ಸತ್ತವರ ಸಂಖ್ಯೆ ಎಷ್ಟು ಎಂಬುದನ್ನು ಸರ್ಕಾರ ನಿಖರವಾಗಿ ಹೇಳಬೇಕಾಗುತ್ತದೆ. ಕಳೆದ ವಾರವಷ್ಟೇ ನಾವು ಝಳಕಿ ಘಟನೆಯ ಬಗ್ಗೆ ಮಾತನಾಡುತ್ತಿದ್ದೇವೆ. ಆ ಬಗ್ಗೆ ಇಲ್ಲಿಯೇ ಚರ್ಚೆಯಾಯಿತು. ಇನ್ನೂ 2-3 ಜನರು ಸಿರೀಯಸ್ಸಾಗಿ ಇನ್‌ಜ್ಯೂರ್ಡ್ ಆಗಿ ಸೊಲ್ಲಾಪುರದ ಆಸ್ಪತ್ರೆಯಲ್ಲಿ ಆಡ್ಮಿಟ್ ಆಗಿದ್ದಾರೆ ಎನ್ನುವ ವಿಚಾರವನ್ನು ನಾವು ಕೇಳಿದ್ದೇವೆ. ಅಲ್ಲಿ ಯಾವ ರೀತಿಯಾಗಿ ಅಮಾಯಕರ ಮೇಲೆ ಪೋಲೀಸರು ನಡೆದುಕೊಂಡರು? ಅಲ್ಲಿದ್ದಂಥ ಎಸ್‌ಪಿ ತಕ್ಷಣವೇ ಬರಲಿಲ್ಲ, ಈ ಎಲ್ಲಾ ಹಿನ್ನೆಲೆಯಲ್ಲಿ ಬಹಳ ದೊಡ್ಡ ದುರಂತ ಝಳಕಿಯಲ್ಲಿ ಆಯಿತು. ಹೀಗಿರುವಾಗ ಮತ್ತೆ ಕೆಲವು ದಿನಗಳಲ್ಲಿಯೇ ಈ ರೀತಿಯ ದುರಂತವಾಗುತ್ತದೆಂದು ನಾವು ಕನಸಿನಲ್ಲೂ ಎಣಿಸಿರಲಿಲ್ಲ. ಅಂಥ ದುರಂತ ಇವತ್ತು ಆಗಿದೆ. ಇದು ಏಕಾಯಿತು? ಇದರ ಬಗ್ಗೆ ಥರೋ ತನಿಖೆಯಾಗಬೇಕು. ಪೋಲೀಸ್ ವ್ಯವಸ್ಥೆ ಮತ್ತು ಆ ಇಲಾಖೆಯ ಮೇಲೆ ಬಿಗಿ ಹಿಡಿತವಿಲ್ಲದಿದ್ದರೆ ಈ ರೀತಿಯಾದ ಘಟನೆಗಳು ಮರುಕಳಿಸುತ್ತವೆ. ಝಳಕಿ ಘಟನೆಯ ನಂತರವಾದರೂ ಪೋಲೀಸ್ ವ್ಯವಸ್ಥೆಯಲ್ಲಿ ಸುಧಾರಣೆಯಾಗಬೇಕಾಗಿತ್ತು. ಅದರ ಬಗ್ಗೆ ವಿಧಾನ ಸಭೆಯಲ್ಲಿ ಸಾಕಷ್ಟು ಚರ್ಚೆಯಾಯಿತು. ಆದರೂ, ಪೋಲೀಸ್ ಅಧಿಕಾರಿಗಳಿಗೆ ಫ್ರಿಕಾಷನ್ ತೆಗೆದುಕೊಳ್ಳುವುದಕ್ಕಾಗಲಿ ಅಥವಾ ಅಲ್ಲಿ ಪಬ್ಲಿಕ್ ದೊಡ್ಡ ಪ್ರಮಾಣದ ಸೇರಿದ ಸಂದರ್ಭದಲ್ಲಿ ಅವರ ಬೇಡಿಕೆಗಳೇನಿವೆ ಎಂದು ನೋಡಿ, ಅವರನ್ನು ವಿಶ್ವಾಸಕ್ಕೆ ತೆಗೆದುಕೊಂಡು, ಅದನ್ನು ಬಗೆಹರಿಸುವ ಜಾಣಾಕ್ಷತನ ಇಲ್ಲದೇ ಇದು ಹೀಗಾಗಿದೆಯೇ? ಈ ರೀತಿ ಏಕಾಗುತ್ತಿದೆಯೆಂದು ನನಗೆ ಅರ್ಥವಾಗುತ್ತಿಲ್ಲ. ಝಳಕಿಯಲ್ಲಿ ನಡೆದ ಗೋಲಿಬಾರ್ ಅನ್ನು ನಿಲ್ಲಿಸಬಹುದಾಗಿತ್ತು. ಹಿರಿಯೂರಿನಲ್ಲಿ ಏನಾಯಿತು? ಗೋಲಿಬಾರ್‌ಗೆ ಆರ್ಡರ್ ಏಕಾಯಿತು? ಇದರ ಬಗ್ಗೆ ವಿಚಾರ ಮಾಡಬೇಕಾಗುತ್ತದೆ. ಇದನ್ನೆಲ್ಲಾ ನೋಡಿದಾಗ ಆ ಪೋಲೀಸ್ ವ್ಯವಸ್ಥೆ ಅಧೋಗತಿಗೆ ಹೋಗುತ್ತಿದೆ ಎಂದು ನನಗೆ ಅನ್ನಿಸುತ್ತಿದೆ. ಇದರ ಬಗ್ಗೆ ಹಿರಿಯೂರಿನಲ್ಲಿ ಏನಾಗಿದೆ? ಎಷ್ಟು ಜನರು ಸತ್ತಿದ್ದಾರೆ?

ಇದು ಏಕಾಯಿತು? ಎನ್ನುವ ಬಗ್ಗೆ ಮಾನ್ಯ ಗೃಹ ಸಚಿವರು ವಿವರಣೆ ಕೊಡಬೇಕಾಗುತ್ತದೆ. ಇದೇ ರೀತಿ ನಡೆದರೆ, ಮೊನ್ನೆ ಮಾತನಾಡಿದ ಹಾಗೆ, ಮುಂದೆ ರಾಜ್ಯದಲ್ಲಿ ಅರಾಜಕತೆ, ಕಾನೂನು, ಸುವ್ಯವಸ್ಥೆ ಹದಗೆಡುವ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಆದ್ದರಿಂದ, ಇದರ ಬಗ್ಗೆ ಸರ್ಕಾರ ಸ್ಪಷ್ಟೀಕರಣ ಕೊಡಬೇಕು.

ಶ್ರೀ ಸಿ.ಭೈರೇಗೌಡ(ವೇಮಗಲ್):– ಮಾನ್ಯ ಉಪಾಧ್ಯಕ್ಷರೆ, ಇತ್ತೀಚೆಗೆ ಏಕೋ, ಏನೋ ನನಗೆ ಗೊತ್ತಿಲ್ಲ, ನಮ್ಮ ಪೋಲೀಸರ ಮೈಮೇಲೆ ಬರುವ ಪರಿಸ್ಥಿತಿ ಉಂಟಾಗಿದೆ. ನಮ್ಮ ಕಡೆ ದೆವ್ವ, ಭೂತ ಇದೆಲ್ಲಾ ಏನಾದರೂ ಬಂದರೆ 'ಮೈಮೇಲೆ ಬರುವುದು' ಎಂದು ಹೇಳುತ್ತಾರೆ. ಇವರಿಗೆ ಮೈಮೇಲೆ ಬಂದ ಹಾಗಿದೆ. ಝಳಕಿಯಲ್ಲಿ ಸತ್ತಂಥ ಹೆಣಗಳ ಶವಸಂಸ್ಕಾರವಾಗಿ ದಿನ, ವಾರ,ತಿಥಿ ಮುಗಿದಿಲ್ಲ. ತಕ್ಷಣವೇ ಅದೇ ಬೆನ್ನಲ್ಲೇ ಇವತ್ತು ಇಲ್ಲಿ 4 ಜನರು ಹತ್ಯೆಯಾಗಿ, 48 ಜನರಿಗೆ ಗಾಯಗಳಾಗಿವೆ. ಮನುಷ್ಯರ ಪ್ರಾಣವೆನ್ನುವುದು ಅಮೂಲ್ಯವಾದುದು. ಯಾರೂ ಸಾಯಬಾರದು. ಅದನ್ನು ನಾವ್ಯಾರೂ ಬಯಸುವುದಿಲ್ಲ. ಗಾಯಗೊಂಡಿರುವವರ ಪ್ರಾಣವನ್ನು ಉಳಿಸುವ ಕೆಲಸವನ್ನು ಸರ್ಕಾರ ತೀವ್ರಗತಿಯಿಂದ ಮಾಡುತ್ತದೆನ್ನುವ ನಂಬಿಕೆ, ಆಶಯವನ್ನು ನಾನು ವ್ಯಕ್ತಪಡಿಸುತ್ತೇನೆ. ಯಾರೂ ಸಾಯಬಾರದು. ಆದರೂ ಸಹ, ಇವತ್ತಿನ ದಿವಸ ಇದಕ್ಕೆ ಕಾರಣವೇನು? ರೈತರ, ಎಲ್ಲಾ ವರ್ಗದ ಜನರ ಸಮಸ್ಯೆಗಳಿರುತ್ತವೆ. ಆದರೆ, ಸಮಸ್ಯೆಗಳನ್ನು ಬಗೆಹರಿಸುವಲ್ಲಿ ಸರ್ಕಾರ ಜಾಣಾಕ್ಷತನವನ್ನು ತೋರಿಸಬೇಕಾದುದು ಅವಶ್ಯಕ. ಅದನ್ನು ತೋರಿಸದೆ ಜನತೆಯ ಬೇಡಿಕೆಗಳನ್ನು ಅಥವಾ ಸಮಸ್ಯೆಗಳನ್ನು ಬಗೆಹರಿಸುವುದರಲ್ಲಿ ಗುಂಡಿನ ಮೂಲಕ ಸಮಸ್ಯೆಗಳನ್ನು ಬಗೆಹರಿಸುತ್ತೇವೆ ಎಂದು ಹೇಳುವ ಯೋಚನೆ, ಆಲೋಚನೆ, ಸರ್ಕಾರಕ್ಕೆ ಬಂದಿರುವುದು ಬಹಳ ದುರಾದೃಷ್ಟಕರ. ಇದನ್ನು ನಾವೆಲ್ಲರೂ ತೀವ್ರವಾಗಿ ಖಂಡಿಸಬೇಕಾಗಿರುವುದು ನಮ್ಮ ಕರ್ತವ್ಯ. ಏಕೆ ಈ ರೀತಿ ಆಗುತ್ತಿದೆ? ಇದು ಸರ್ಕಾರದ ವೈಫಲ್ಯತೆಯನ್ನು ಎತ್ತಿ ತೋರಿಸುತ್ತಿದೆ. ಇದರ ಪರಿಣಾಮ ಬೇರೆ ಕಡೆ ಬೀರುತ್ತದೆಯೋ, ಏನೋ? ಆ ರೀತಿ ಬೀರಬಾರದು. ಈ ರೀತಿಯಾದ ಕೃತ್ಯಗಳು ಎಲ್ಲಿಯೂ ಕೂಡ ನಡೆಯಬಾರದು. ಜನರ ಆಲೋಚನೆ ಯಾವ ರೀತಿ ಇರುತ್ತದೆ? ಅವರು ಯಾವ ರೀತಿ ಯೋಚಿಸುತ್ತಾರೆಂದು ಊಹಿಸುವುದು ಕಷ್ಟ. ಅಂಥ ಸಂದರ್ಭಗಳಲ್ಲಿ ಇದನ್ನು ತಪ್ಪಿಸುವಂತಹ ಎಲ್ಲಾ ಕ್ರಮಗಳನ್ನೂ ಸರ್ಕಾರ ಮಾಡಬೇಕಾಗಿರುತ್ತದೆ. ಜಿಲ್ಲಾಧಿಕಾರಿಗಳಿರಬಹುದು, ಪೋಲೀಸ್ ಅಧಿಕಾರಿಗಳಿರಬಹುದು, ವಿಶೇಷವಾಗಿ ಬೆಂಗಳೂರಿನಲ್ಲಿರುವ ಹಿರಿಯ ಅಧಿಕಾರಿಗಳಿರಬಹುದು, ಇವರು ತತ್‌ಕ್ಷಣವೇ ಅಲ್ಲಿಗೆ ಹೋಗಬೇಕಾಗುತ್ತದೆ. ಟೆಲಿಫೋನ್, ಹೆಲಿಕಾಪ್ಟರ್ ಎಲ್ಲಾ ವ್ಯವಸ್ಥೆ ಇದೆ. ಅವರು ಸ್ಥಳದಲ್ಲಿಯೇ ಕುಳಿತು ಉದ್ರೇಕಗೊಂಡಿರುವ ಜನರ ಭಾವನೆಗಳನ್ನು ಅರ್ಥ ಮಾಡಿಕೊಂಡು ಅದನ್ನು ಶಮನ ಮಾಡುವ ಬದಲಿಗೆ ಗುಂಡಿನಿಂದ ಅವರ ಭಾವನೆಗಳನ್ನು ಶಮನಗೊಳಿಸುತ್ತೇವೆಂದು ಹೇಳಿದರೆ ಅಂಥ ಮಹತ್ತರವಾದ ತಪ್ಪು ಮತ್ತೊಂದಿಲ್ಲವೆಂದು ಸರ್ಕಾರ ಅರ್ಥ ಮಾಡಿಕೊಳ್ಳಬೇಕು ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಅದರ ವಿವರಗಳನ್ನು ದಯವಿಟ್ಟು ತಿಳಿಸಬೇಕಾಗುತ್ತದೆ. ಸಂಬಂಧಪಟ್ಟ ಅಧಿಕಾರಿಗಳು ಯಾರಿದ್ದಾರೆ, ಅವರು ತಪ್ಪಿತಸ್ಥರಾಗಿದ್ದರೆ, ತತ್‌ಕ್ಷಣ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಈ ಸದನದಲ್ಲಿ ಭರವಸೆಯನ್ನು ಸರ್ಕಾರ ಕೊಡಬೇಕಾಗುತ್ತದೆ. ಕಾರಣವೇನೆಂದರೆ, ನೊಂದಿರುವವರಿಗೆ, ಜೀವ ಕಳೆದುಕೊಂಡಿರುವವರಿಗೆ ಕುಟುಂಬದವರ ಮನಸ್ಸಿಗೆ ಶಾಂತಿಯನ್ನು ದೊರಕಿಸಬೇಕಾದುದು ಮತ್ತು

ಉದ್ರೇಕಗೊಂಡಿರುವ ಜನರ ಮನಸ್ಸಿನಲ್ಲಿ ನೆಮ್ಮದಿ ತರಬೇಕಾದ ಅವಶ್ಯಕತೆ ಇದೆ. ಈ ಕೆಲಸವನ್ನು ಸರ್ಕಾರ ಮಾಡಬೇಕೆಂದು ನಾನು ತಮ್ಮ ಮೂಲಕ ವಿನಂತಿಸುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ(ಗೃಹ ಮತ್ತು ಸಣ್ಣ ನೀರಾವರಿ ಸಚಿವರು):- ಮಾನ್ಯ ವಿರೋಧ ಪಕ್ಷದ ನಾಯಕರು ಮಾನ್ಯ ಸಿಂಧ್ಯರವರು ಮಾನ್ಯ ಭೈರೇಗೌಡರೇನು ಈಗ ವಿಚಾರವನ್ನು ಪ್ರಸ್ತಾಪಿಸಿದ್ದಾರೆ, ಅದು ನನಗೂ ಕೂಡ ಒಂದು ರೀತಿಯಲ್ಲಿ ಕಳವಳವನ್ನುಂಟು ಮಾಡುವ ಸನ್ನಿವೇಶ ಎನ್ನುವ ಮಾತನ್ನು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ಘಟನೆ ಏಕೆ ನಡೆದಿದೆ? ಹೇಗೆ ನಡೆದಿದ್ದೆ? ಎನ್ನುವ ಬಗ್ಗೆ ವಿವರ ತರಿಸಿಕೊಳ್ಳುತ್ತೇನೆ. ಇದರ ಬಗ್ಗೆ ನನಗೂ ಕೂಡ ಈಗ ಸುಮಾರು ಒಂದು ಗಂಟೆಯ ಹಿಂದೆ ಮಾಹಿತಿ ಬಂದಿದೆ. ಏಕೆಂದರೆ, ಹಿರಿಯೂರಿನಲ್ಲಿ ಜಿಲ್ಲಾಧಿಕಾರಿಗಳು, ಎಸ್‌ಪಿ, ಡಿವೈಎಸ್‌ಪಿ ಎಲ್ಲರೂ ಅಲ್ಲಿಯೇ ಇದ್ದ ಕಾರಣ ಸವಿಸ್ತಾರವಾದ ಮಾಹಿತಿ ಇನ್ನೂ ನನಗೆ ಸಿಕ್ಕಿಲ್ಲ. ಅದಕ್ಕೆ ನಾನು ಡಿಜಿಪಿಯವರಿಗೆ ಸಂಪೂರ್ಣವಾದ ಮಾಹಿತಿ ತೆಗೆದುಕೊಂಡು ಬನ್ನಿ ಎಂದು ಹೇಳಿದ್ದೇನೆ. ಆ ಮಾಹಿತಿ ಬಂದಮೇಲೆ, ನಾನು ಈ ಘಟನೆ ಬಗ್ಗೆ ಇಲ್ಲಿ ವಿವರವನ್ನು ಕೊಡುತ್ತೇನೆ. ಅದಕ್ಕೆ ದಯವಿಟ್ಟು ಸ್ವಲ್ಪ ಕಾಲಾವಕಾಶ ಕೊಡಬೇಕು. ಇದರ ಬಗ್ಗೆ ನಾನು ನಾಳೆ ವಿವರವಾದ ಹೇಳಿಕೆಯನ್ನು ಕೊಡುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ:- ಮಾನ್ಯ ಅಧ್ಯಕ್ಷರೆ, ಇದರಲ್ಲಿ ಎರಡು ಮೂಲಬೂತ ಪ್ರಶ್ನೆಗಳು ಅಡಕವಾಗಿವೆ. ಮಾನ್ಯ ಗೃಹ ಮಂತ್ರಿಗಳು ಈ ವಿಚಾರದ ಬಗ್ಗೆ ಕಳವಳ, ಆತಂಕವನ್ನು ವ್ಯಕ್ತಪಡಿಸಿದ್ದಾರೆ. ಅದನ್ನು ನಾನು ಒಪ್ಪುತ್ತೇನೆ. ನಾನು ಕೇಳುತ್ತಿರುವುದು, ಎರಡು ತಿಂಗಳಿನಿಂದ ಹಿರಿಯೂರಿನಲ್ಲಿ ಇದರ ಬಗ್ಗೆ ಪ್ರತಿಭಟನೆ ನಡೆಯುತ್ತಿದೆ. ಗೃಹ ಮಂತ್ರಿಗಳಾಗಿ ತಮಗೆ ಇದರ ಬಗ್ಗೆ ವರದಿ ಬಂದಿರುತ್ತದೆ. ಕಳೆದ 3 ದಿನಗಳಿಂದ ತೀವ್ರವಾದ ಚಳವಳಿ ಅಲ್ಲಿ ನಡೆಯುತ್ತಿದೆ. ಪರಿಸರವಾದಿಗಳು, ರೈತರು ಅನೇಕ ಹಳ್ಳಿಗಳಲ್ಲಿ 20 ಕಿ.ಮೀ. ಡಿಸ್ಟೆನ್ಸ್‌ನಲ್ಲಿ ಇದನ್ನು ಯಾವುದೇ ಕಾರಣಕ್ಕೂ ಮಾಡುವುದಕ್ಕೆ ಬಿಡುವುದಿಲ್ಲವೆನ್ನುವ ಬಗ್ಗೆ ಅವರು ಪ್ರತಿಭಟನೆ ಮಾಡಿದ್ದಾರೆಂಬುದು ತಮ್ಮ ಗಮನಕ್ಕೆ ಬಂದಿಲ್ಲವೆ? ಹಾಗೆ ಬಂದಮೇಲೆ, ನೀವು ತೆಗೆದುಕೊಂಡಿರುವ ಕ್ರಮಗಳೇನು? ಫೈರಿಂಗ್ ಆಗಿದೆ, ಪೋಲೀಸ್ ಸ್ಟೇಷನ್‌ಗೆ ಮುತ್ತಿಗೆ ಹಾಕಿದ್ದಾರೆಯೋ? ಬೇರೆ ಏನು ಮಾಡಿದರು ಎಂಬುದರ ಬಗ್ಗೆ ವಿವರಗಳನ್ನು ನೀವು ಕೊಡುತ್ತೀರಿ. ಎಷ್ಟು ಜನರು ಸತ್ತರೆಂದು ತಾವು ಹೇಳಲಿಲ್ಲ. ಪರಿಸ್ಥಿತಿ ನಿಯಂತ್ರಿಸಲು ನೀವು ತೆಗೆದುಕೊಂಡಿರುವ ಕ್ರಮಗಳೇನು? ಅಲ್ಲಿಗೆ ಡಿಜಿಪಿ, ಎಡಿಜಿಪಿಯವರು ಹೋಗಿದ್ದಾರೆಯೇ? ಇದುವರೆಗೆ ಏನು ಕ್ರಮ ತೆಗೆದುಕೊಂಡಿದ್ದೀರಿ? ಎರಡನೆಯದಾಗಿ, ಅವರಿಗೆ ಲೈಸೆನ್ಸ್ ಕೊಟ್ಟಿದ್ದೀರಿ. ಆ ಲೈಸೆನ್ಸ್‌ನ್ನು ನೀವು ತತ್‌ಕ್ಷಣವೇ ರದ್ದುಪಡಿಸಬೇಕು. ಅವರು ತಮಿಳುನಾಡಿನಿಂದ ರಾತ್ರೋರಾತ್ರಿ ಬಂದಿರುವುದು, ಸ್ಥಾವರವನ್ನು ಪ್ರಾರಂಬಿಸಲು ಬಂದಿರುವುದು, ಸ್ಥಳೀಯ ವಿಷಯಗಳು, ಇವೆಲ್ಲಾ ಗೃಹ ಮಂತ್ರಿಗಳಿಗೆ, ಸರ್ಕಾರಕ್ಕೆ ಗೊತ್ತಿದೆ. ಆದರೂ , ನನಗೆ ಗೊತ್ತಿಲ್ಲವೆಂದು ಹೇಳುವುದು ಅಷ್ಟೊಂದು ಸೂಕ್ತವಾಗಿ ಕಾಣುವುದಿಲ್ಲ. ಸದನವನ್ನು, ರಾಜ್ಯದ ಜನತೆಯನ್ನು ನೀವು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು. ಮೊನ್ನೆ ತಾನೇ ಇವರು ಎಚ್ಚರಿಕೆ ಕೊಟ್ಟರು. SP is directly responsible for all kinds of firing. ಯಾವುದೇ ಸರ್ಕಾರವಿರಲಿ, ಸಾರ್ವತ್ರಿಕವಾಗಿ ಪ್ರತಿಭಟನೆಯಾಗುತ್ತದೆ, ಇದು ಸ್ವಾಭಾವಿಕ. ಇದರಲ್ಲಿ ಕಾಂಗ್ರೆಸ್, ಜನತಾದಳ, ಬಿಜೆಪಿ ಎಂಬ ಪ್ರಶ್ನೆ ಏನೂ ಬರುವುದಿಲ್ಲ. ಝಳಕಿಯಲ್ಲಿ ಘಟನೆ ಆಕಸ್ಮಿಕವಾಗಿ ನಡೆದು ಹೋಯಿತೆಂದು ಹೇಳುತ್ತೀರಿ. ಆದರೆ, ಇದು ಎರಡು ತಿಂಗಳಿನಿಂದ

ನಡೆಯುತ್ತಿರುವ ಚಳವಳಿ. ನಾವು ಮೂಲಭೂತವಾಗಿ ಪ್ರಶ್ನೆ ಮಾಡುವುದೇನೆಂದರೆ, ನೀವು ಯಾವ ಆಧಾರದ ಮೇಲೆ ಲೈಸೆನ್ಸ್ ಕೊಟ್ಟಿರಿ? ಆ ಚಳವಳಿಯನ್ನು ಉಪಶಮನ ಮಾಡಬೇಕು, ಅಲ್ಲಿ ಶಾಂತ ಪರಿಸ್ಥಿತಿ ಬರಬೇಕೆಂದು ಹೇಳಿದರೆ, ಆ ಲೈಸೆನ್ಸ್ ಅನ್ನು ರದ್ದು ಪಡಿಸಬೇಕು. ಎರಡನೆಯದಾಗಿ, ಇದನ್ನು ಯಾವ ರೀತಿ ಕೊಟ್ಟರೆಂಬ ಬಗ್ಗೆ ಸದನ ಸಮಿತಿ ರಚನೆಯಾಗಬೇಕು. ಜನರು ವಿರೋಧಿಸಿದರೂ ಸಹ ಯಾವ ರೀತಿ ಇದಕ್ಕೆ ಪರವಾನಿಗಿ ಕೊಟ್ಟರು ಎನ್ನುವುದು ಗೊತ್ತಾಗಬೇಕು. ನ್ಯಾಯಾಂಗ ತನಿಖೆ ಮಾಡುವುದು, ಸ್ವಾಭಾವಿಕವಾಗಿ ಸರ್ಕಾರದವರು ತಮ್ಮ ವೈಫಲ್ಯತೆಯನ್ನು ಮುಚ್ಚಿಕೊಳ್ಳಲು ನ್ಯಾಯಾಂಗ ತನಿಖೆಗೆ ಜವಾಬ್ದಾರಿ ಕೊಡುತ್ತೇವೆಂದು ಹೇಳುತ್ತಾರೆ. ಆದರೆ, ಈಗ ಮುಖ್ಯವಾಗಿ ಏಕೆ ನೀವು ಪರ್ಮಿಷನ್ ಕೊಟ್ಟಿರಿ? ಏಕೆ ಕ್ರಮ ತೆಗೆದುಕೊಳ್ಳಲಿಲ್ಲ? ಈ ವಿಚಾರ ಎರಡು ತಿಂಗಳಿನಿಂದ ನಿಮಗೆ ಗೊತ್ತಿತ್ತಲ್ಲವೆ? ಏನು ಕ್ರಮ ತೆಗೆದುಕೊಂಡಿದ್ದೀರಿ? ಎಂಬ ಬಗ್ಗೆ ಗೃಹ ಮಂತ್ರಿಗಳು ರಾಜ್ಯಕ್ಕೆ ತಿಳಿಸಬೇಕು.

ಶ್ರೀ ಮಲ್ಲಿಕಾರ್ಜುನ ಖರ್ಗೆ:- ಈಗಾಗಲೇ ಪರ್ಮಿಷನ್ ಅನ್ನು ಇಂಡಸ್ಟ್ರೀ ಡಿಪಾರ್ಟ್‌ಮೆಂಟಿನವರು ಅಥವಾ ಸಂಬಂಧಪಟ್ಟ ಇಲಾಖೆಯವರು ಏಕೆ ಕೊಟ್ಟರು? ಅದರಲ್ಲಿ ಏನಿದೆ ಎನ್ನುವ ವಿವರಗಳನ್ನು ಅವರು ಕೊಡಬಹುದು. ಇದಕ್ಕೆ ಸಂಬಂಧಿಸಿದಂತೆ ಈ ಸಿಚ್ಯುಯೇಷನ್ ಅನ್ನು ಹತೋಟಿಗೆ ತರುವುದಕ್ಕೆ ಏನು ಮಾಡಿದ್ದೀರಿ ಎನ್ನುವ ಪ್ರಸ್ತಾಪವನ್ನು ಮಾನ್ಯ ಸದಸ್ಯರು ಮಾಡಿದ್ದಾರೆ. ಈಗಾಗಲೇ ನಾವು ಅಡಿಷನಲ್ ಡಿಜಿಪಿಯವರನ್ನು ಅಲ್ಲಿಗೆ ಕಳುಹಿಸಿದ್ದೇವೆ. ತಕ್ಷಣ ಅವರು ಸ್ಥಳಕ್ಕೆ ಹೋಗಿ, ನೋಡಿಕೊಂಡು ಸಿಚುಯೇಷನ್ ಅನ್ನು ನಿಯಂತ್ರಿಸಬೇಕೆಂದು ನಾನು ಅವರಿಗೂ ಹೇಳಿದ್ದೇನೆ. ನಮ್ಮ ಎಲ್ಲಾ ಅಧಿಕಾರಿಗಳೂ ಚಿತ್ರದುರ್ಗ, ಹಿರಿಯೂರಿನಲ್ಲಿ ಸಂಪರ್ಕಿಸಿ, ಅಲ್ಲಿ ಆದಷ್ಟೂ ಫೋರ್ಸ್ ಅನ್ನು ಅಕ್ಕ ಪಕ್ಕದ ಜಿಲ್ಲೆಗಳಿಂದ ಪಡೆಯಲು ಹೇಳಿದ್ದೇವೆ. ಈಗಾಗಲೇ ಡಿಆರ್ ಫೋರ್ಸ್ ಮತ್ತು ಬೇರೆ ರಿಸರ್ವ್ ಫೋರ್ಸ್ ಅನ್ನು ಅಲ್ಲಿಗೆ ಕಳುಹಿಸಿದ್ದೇವೆ. ಅಲ್ಲಿ ಸಿಚ್ಯುಯೇಷನ್ ಸದ್ಯಕ್ಕೆ ಹತೋಟಿಯಲ್ಲಿ ತರುವುದಕ್ಕೆ ಎಲ್ಲಾ ಪ್ರಯತ್ನಗಳು ನಡೆದಿವೆ, ಸದ್ಯಕ್ಕೆ ಪರಿಸ್ಥಿತಿ ಅಲ್ಲಿ ಶಾಂತವಾಗಿದೆ. ಉಳಿದಂತಹ ಮಾಹಿತಿಗಳು ಅಂದರೆ, ಯಾವ ಕಾರಣಕ್ಕಾಗಿ ಲೈಸೆನ್ಸ್ ಕೊಟ್ಟರು? ಅಲ್ಲಿ ಪ್ರತಿಭಟನೆ ಏನು ನಡೆಯಿತು? ಆ ವಿವರವನ್ನು ಸಂಬಂಧಪಟ್ಟ ಸಚಿವರಿಂದ ಎಲ್ಲಾ ಹೇಳಿಕೆಯನ್ನು ಕೊಡಿಸುತ್ತೇನೆ. ಇದರ ಬಗ್ಗೆ ವಿವರವಾದ ಒಂದು ಹೇಳಿಕೆಯನ್ನು ನಾನು ನೀಡುತ್ತೇನೆ. ಅಲ್ಲಿ ಏನು ಒಂದು ಘಟನೆ ನಡೆದು ಹೋಗಿದೆ. ಆದ್ದರಿಂದ ರೈತರಲ್ಲಿ ಕೂಡ ನಾನು ಮನವಿಯನ್ನು ಮಾಡಿಕೊಳ್ಳುತ್ತಿದ್ದೇನೆ. ಘಟನೆ ಏನೋ ನಡೆದು ಹೋಗಿದೆ, ಚಳುವಳಿ ಮಾಡತಕ್ಕಂಥ ಜನರನ್ನು ಹಾಗೂ ಅದರ ಮುಖಂಡತ್ವವನ್ನು ವಹಿಸಿಕೊಂಡವರಲ್ಲಿ ಈ ಸದನದ ಮೂಲಕ ಅಲ್ಲಿ ಶಾಂತಿಯನ್ನು ಕಾಪಾಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ(ಕನಕಪುರ):- ಮಾನ್ಯ ಉಪಾಧ್ಯಕ್ಷರೆ, ಅವರು ಶಾಂತ ರೀತಿಯಿಂದ ಇರಬೇಕೆಂದು ಹೇಳಿದರೆ ಅದಕ್ಕೆ ಬೇಸಿಸ್ ಏನು? ನನ್ನ ಹತ್ತಿರ ಪೇಪರ್ ಕಟ್ಟಿಂಗ್ಸ್ ಇವೆ, ತಾವು ದಯವಿಟ್ಟು ಯಿಲ್ಡ್, ಆಗಿ, ಅವರು ಎರಡು ತಿಂಗಳಿಂದ ಅಜಿಟೇಷನ್ ಮಾಡುತ್ತಿರುವುದನ್ನು ತಾವು ನೋಡುತ್ತಿದ್ದೀರಿ? Home Department is the mother of alll departments. ಯಾವ ಡಿಪಾರ್ಟ್‌ಮೆಂಟಿನಲ್ಲಿ ಏನೇನು ಆಗುತ್ತದೆ ಎನ್ನುವುದರ ಬಗ್ಗೆ ನಿಮಗೆ ಪ್ರತಿನಿತ್ಯ ವರದಿ ಬರುತ್ತದೆ. ಆ ವರದಿ ಬರದೇ ಹೋದರೆ ನೀವು ಅದನ್ನು ಓದದೆ ಹೋದರೆ, that is a failure on your part. ಎರಡು ತಿಂಗಳಿನಿಂದ ಅಜಿಟೇಷನ್

ನಡೆಯುತ್ತಿದೆ. ಜನ ಅಲ್ಲಿ ಅದನ್ನು ಮಾಡುವುದು ಬೇಡವೆಂದು ಹೇಳುತ್ತಿದ್ದಾರೆ. ಮೂರು ದಿವಸಗಳಿಂದ ಅವರು ಇಂಟೆನ್ಸೀವ್ ಆಗಿ ಅಜಿಟೇಷನ್ ಮಾಡುತ್ತಿದ್ದಾರೆ, ಇಲ್ಲಿ ನಾನು ಒಂದು ಮಾತನ್ನು ಹೇಳಬೇಕಾಗುತ್ತದೆ, ಯಾರು ಆ ಇಂಡಸ್ಟ್ರೀಯಲಿಸ್ಟ್ ಇದ್ದಾರೆ, ಯಾರಿಗೆ ನೀವು ಪವರ್ ಪ್ರಾಜೆಕ್ಟ್‌ಗೆ ಪರ್ಮಿಷನ್ ಕೊಟ್ಟಿದ್ದೀರಿ, ಅವರ ಪರವಾಗಿ ನೀವು ಪೈರಿಂಗ್ ಮಾಡಿ ಎಂದು ನೀವು ಪೋಲೀಸಿನವರಿಗೆ ಪರ್ಮಿಷನ್ ಕೊಟ್ಟಿದ್ದೀರಾ? ಅದರ ಬಗ್ಗೆ ನಮಗೆ ತಿಳುವಳಿಕೆ ಬರಬೇಕಲ್ಲವೆ? Your message has to reach. ಮಾನ್ಯ ಉಪಾಧ್ಯಕ್ಷರೆ, ಅಲ್ಲಿರತಕ್ಕಂಥ ಅಜಿಟೇಟಿಂಗ್ ಪೀಪಲ್ಸ್ ಏನಿದ್ದಾರೆ ಅವರಿಗೆ ಒಂದು ಮೆಸೇಜ್ ಹೋಗಬೇಕು. ಇಲ್ಲಿ ಸದನ ನಡೆಯುತ್ತಿದೆ, ಅಲ್ಲಿ ರಕ್ತಸಿಕ್ತವಾದ ಹೆಣಗಳನ್ನು ಅಲ್ಲಿ ಎತ್ತಿ ಹಾಕುತ್ತಿದ್ದಾರೆ, ನಮಗೆ ಗೊತ್ತಿರುವ ಹಾಗೆ ಹತ್ತಾರು ಜನರನ್ನು ಆಸ್ಪತ್ರೆಗೆ ಸೇರಿಸಿದ್ದಾರೆ, ಅಲ್ಲಿ ಪರಿಸ್ಥಿತಿ ಶಾಂತಮಯವಾಗಬೇಕು, ಮತ್ತೆ ಅಲ್ಲಿ ಚಳುವಳಿ ಆಗಬಾರದೆಂದು ಹೇಳುವುದಾದಲ್ಲಿ ಇದು ಅಲ್ಲಿಗೆ ನಿಲ್ಲುವುದಿಲ್ಲ. ತಾವು ಏನು ತಿಳಿದುಕೊಂಡಿದ್ದೀರಾ? ಝಳಕಿಯ ಪ್ರಕರಣದಲ್ಲಿ ನೀವು ಎಸ್‌ಪಿ-ಯವರನ್ನು ವರ್ಗಾವಣೆ ಮಾಡಿದ್ದರೆ, ಎಸ್‌ಪಿ ಮೇಲೆ ಆಕ್ಷನ್ ತೆಗೆದುಕೊಂಡಿದ್ದರೆ, ಇನ್ನೊಬ್ಬ ಎಸ್.ಪಿ.ಗೆ ಅದು ವಾರ್ನಿಂಗ್ ಆಗುತ್ತಿತ್ತು. ಝಳಕಿ ಪ್ರಕರಣದಲ್ಲಿ ನೀವು ಯಾವ ತರಹ ಮಾತನಾಡಿದಿರಿ ಎಂದರೆ, as if nothing has happened. It is a dispute between the Sub-Inspector and the Circle Inspector. ಎನ್ನುವ ಮಟ್ಟದಲ್ಲಿ ಹೇಳಿ ಅದು ಆತ್ಮಹತ್ಯೆ ಪ್ರಕರಣವೆಂದು ಮಾಡಿದಿರಿ. ನೀವು ನಮ್ಮನ್ನು ಎಷ್ಟೊಂದು ಹ್ಯುಮಿಲಿಯೇಟ್ ಮಾಡಿದಿರಿ ಎಂದರೆ, ಆ ಬಾಡಿಯನ್ನು ಎಕ್ಸ್‌ಹ್ಯೂಮ್ ಮಾಡುವುದಕ್ಕೆ, ಯಾವುದಾದರೊಂದು ಆರ್ಡಿನರಿ ರೇಸ್‌ಕೋರ್ಸ್‌ನಲ್ಲಿರುವ ಕುದುರೆ ಸತ್ತುಹೋಯಿತು ಅಂದರು, ಯಾರಾದರೂ ಹೋಗಿ ಕಂಪ್ಲೇಂಟ್ ಮಾಡಿದರೆ, ಬಾಡಿಯನ್ನು ಮತ್ತೆ ತೆಗೆದು ಕುದುರೆಯನ್ನು ಪೋಸ್ಟ್‌ಮಾರ್ಟ್‌ಂ ಮಾಡಿರುವ ಕಥೆಗಳು ನನಗೆ ಗೊತ್ತಿದೆ. (ಪ್ರಸಂಗಗಳು ಕಥೆಗಳು ಅಲ್ಲ, ಅದರ ಬಗ್ಗೆ ನಾನು ತಿದ್ದಿಕೊಳ್ಳುತ್ತೇನೆ.) ಬಾಡಿಯನ್ನು ತೆಗೆದು ಪೋಸ್ಟ್‌ಮಾರ್ಟ್‌ಂ ಮಾಡಬೇಕು ಎಂದು ಹೇಳಿದರೆ, ಸಿಓಡಿ ಯವರು ಮ್ಯಾಜಿಸ್ಟ್ರೇಟ್‌ಗೆ ಕೊಡುತ್ತಾರೆ, ಇದು ಎಲ್ಲಾ ಮಾಡುವುದರೊಳಗಾಗಿ ಆ ಬಾಡಿ ಎಲ್ಲಾ ಗೆದ್ದಲು ತಿಂದು ಮಣ್ಣುಪಾಲಾಗಿ ಹೋಗಿರುತ್ತದೆ. What is the message you are giving? This is a total failure on the part of the government and the Police Department.

ಶ್ರೀ ಮಲ್ಲಿಕಾರ್ಜುನ ಖರ್ಗೆ (ಮಾನ್ಯ ಗೃಹ ಮತ್ತು ಸಣ್ಣ ನೀರಾವರಿ ಸಚಿವರು):- ಮಾನ್ಯ ಉಪಾಧ್ಯಕ್ಷರೆ, ನಾವು ಈಗಾಗಲೇ ಸಿಓಡಿ-ಗೆ ಹೇಳಿದ್ದೇವೆ, ಸಿಓಡಿ-ಯವರು ಆ ಬಾಡಿಯನ್ನು ಎಕ್ಸ್‌ಹ್ಯೂಮ್ ಮಾಡುತ್ತಾರೆ. ಅದನ್ನು ಪುನರ್ ಪರೀಕ್ಷೆ ಮಾಡುವುದಕ್ಕೆ ಆದೇಶ ಕೊಟ್ಟಾಗಿದೆ, ಅದನ್ನು ಅವರು ಮಾಡುತ್ತಾರೆ. ಅದಕ್ಕಾಗಿ ಬೇರೆ ಪ್ರಶ್ನೆಯೇ ಇಲ್ಲ, ನಾವು ಸದನದಲ್ಲಿ ಏನು ಹೇಳಿದ್ದೇವೆ, ಅದರ ಪ್ರಕಾರ ನಾವು ನಡೆದುಕೊಳ್ಳುವುದಕ್ಕೆ ಮಾಡಿದ್ದೇವೆ. ಇದರ ಬಗ್ಗೆ ನಾನು ಏಕೆ ಹೇಳಿದ್ದೇನೆಂದರೆ, ನನಗೆ ವರದಿ ಬಂದಮೇಲೆ ನಾನು ಸವಿಸ್ತಾರವಾಗಿ ಉತ್ತರ ಕೊಡುವುದು ಒಳ್ಳೆಯದು. ಯಾವುದೇ ಒಂದು ವರದಿಯನ್ನು ಅಥೆಂಟಿಕ್ಕಾಗಿ ಸದನದ ಮುಂದೆ ಇಡುವುದು ಒಳ್ಳೆಯದು ಎನ್ನತಕ್ಕಂಥ ದೃಷ್ಟಿಯಿಂದ ನಾನು ಹೇಳಿದೆ. ಅದಕ್ಕಾಗಿ ಅಲ್ಲಿಗೆ ನಮ್ಮ ಎಡಿಜಿಪಿ-ಯವರು ಹೋಗಿದ್ದಾರೆ. ಅಲ್ಲಿಯ ವಾತಾವರಣವನ್ನು ಶಾಂತವಾಗಿ ಇಡುವುದಕ್ಕೆ ನಾನು ಏಕೆ ಅಪೀಲ್ ಮಾಡಿಕೊಳ್ಳುತ್ತಿದ್ದೇನೆಂದರೆ, ಅದು ರಾಷ್ಟ್ರೀಯ ಹೆದ್ದಾರಿ ಆಗಿರುವುದರಿಂದ, ಅಲ್ಲಿ ಅನೇಕ ಜನರು

ಹೊರಗಡೆಯಿಂದ ಬರುತ್ತಿರುತ್ತಾರೆ, ಈ ಕಡೆಯಿಂದ ಕೂಡ ಜನರು ಹೋಗುತ್ತಿರುತ್ತಾರೆ ಹಾಗೂ ಬಳ್ಳಾರಿ ಕಡೆಯಿಂದ ಬರುತ್ತಾ ಇರುತ್ತಾರೆ. ಅಲ್ಲಿ ವಾತಾವರಣ ತಿಳಿಯಾಗಿದ್ದರೆ ಸಾಮಾನ್ಯ ನಾಗರೀಕರಿಗೂ ಕೂಡ ಅನುಕೂಲ ಮಾಡಿಕೊಟ್ಟಂತಾಗುತ್ತದೆ ಎನ್ನುವ ದೃಷ್ಟಿಯಿಂದ ಹೇಳಿದೆ. ಇನ್ನೋಸೆಂಟ್ ಜನ ಇದರಲ್ಲಿ ಯಾರಿಗೆ ಸಂಬಂಧವಿಲ್ಲ, ಅವರು ಚಳುವಳಿಗಾರರು ಅಲ್ಲಿ ಮತ್ತು ಇಂಡಸ್ಟ್ರಿಯಲಿಸ್ಟ್ ಅಲ್ಲ ಅಂಥವರಿಗೆ ಕೂಡ ತೊಂದರೆಯಾಗಬಾರದು ಎನ್ನುವ ದೃಷ್ಟಿಯಿಂದ ನಾನು ಅಪೀಲ್ ಮಾಡಿಕೊಳ್ಳುತ್ತಿದ್ದೇನೆ. ಅಲ್ಲಿರತಕ್ಕಂಥ ಚಳುವಳಿಗಾರರು ಮತ್ತು ಯಾರು ಅದರ ಮುಖಂಡತ್ವವನ್ನು ವಹಿಸಿಕೊಂಡಿರುತ್ತಾರೆ. ಅವರು ಅಲ್ಲಿ ಎಲ್ಲರೂ ಸೇರಿ ವಾತಾವರಣವನ್ನು ಶಾಂತಿಯಾಗಿ ಇಡಬೇಕು. ಅಲ್ಲಿಂದ ಬಂದ ಫ್ಯಾಕ್ಟ್ಸ್ ಆಧಾರದ ಮೆಲೆ ಸರ್ಕಾರ ಅವರ ಮೇಲೆ ಕ್ರಮ ಜರುಗಿಸುತ್ತದೆ, ಇದರಲ್ಲಿ ಯಾವ ಮುಚ್ಚುಮರೆ ಇಲ್ಲ, ಇಂಡಸ್ಟ್ರೀಯಲಿಸ್ಟ್ ಪರ ಎನ್ನತಕ್ಕಂಥ ಪ್ರಶ್ನೆಯೇ ಇಲ್ಲ, ಯಾವುದೇ ಇಂಡಸ್ಟ್ರಿಯಲಿಸ್ಟ್ ಇದ್ದರೂ ಕೂಡ ಅಂಥವರ ಮುಖವನ್ನು ಕೂಡ ನಾವು ನೋಡಿಲ್ಲ, ಅದು ನಮಗೂ ಸಂಬಂಧವಿಲ್ಲ. ಇದು ಯಾವ ಕಾರಣಕ್ಕಾಗಿ, ಹೇಗೆ ಆಗಿದೆ ಎನ್ನುವುದರ ಬಗ್ಗೆ ನಾನು ತಮಗೆ ವಿವರವನ್ನು ಕೊಡಬೇಕಾದರೆ, ನಾನು ನಿಜವಾಗಿ ಯಾವುದಾದರೂ ಒಂದು ಆಧಾರದ ಮೇಲೆ ವಿವರವನ್ನು ಕೊಡಬೇಕಾಗುತ್ತದೆ. ಅದಕ್ಕಾಗಿ ದಯವಿಟ್ಟು ಮಾಹಿತಿ ಅಲ್ಲಿಂದ ಬರುವವರೆಗೆ ತಾವು ತಾಳಬೇಕು, ನಾನು ಖಂಡಿತವಾಗಿ ನಾಳೆಯ ದಿವಸ ಸ್ಪಷ್ಟವಾದ, ವಿವರವಾದ ಒಂದು ಹೇಳಿಕೆಯನ್ನು ಕೊಡುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ:– ಮಾನ್ಯ ಉಪಾಧ್ಯಕ್ಷರೆ, ಶಾಂತಿಯನ್ನು ಕಾಪಾಡಬೇಕೆಂದರೆ ಹೇಗೆ? ನ್ಯಾಷನಲ್ ಹೈವೇ ಟ್ರಾಫಿಕ್ ಜಾಮ್ ಆಗಿದೆ, ಇನ್ನೂ ಹೆಚ್ಚಿನ ಅನಾಹುತಗಳು ಏನೇನು ಆಗುತ್ತವೆಯೋ ಗೊತ್ತಿಲ್ಲ. ನಾವೂ ಸಹಿತ ನಿಮ್ಮ ಜೊತೆಯಲ್ಲಿ ಸೇರಿಕೊಂಡಿದ್ದೇವೆ, ಈಗ ಇರತಕ್ಕಂಥ ಪ್ರಶ್ನೆ ಏನು ಎಂದರೆ, the systematic failure of police. ಪೋಲೀಸರ ಮೇಲೆ ನಿಮಗೆ ಕಂಟ್ರೋಲ್ ತಪ್ಪಿ ಹೋಗಿದೆ; ಚಳುವಳಿ ಮಾಡುವ ಜನ ಅಲ್ಲಿ ಶಾಂತ ರೀತಿಯಿಂದ ಇರಬೇಕಾದರೆ, ನೀವು ಏನು ಪರ್ಮಿಷನ್ ಕೊಟ್ಟಿದ್ದೀರಿ, ಆ ಜಿಲ್ಲೆ ಹಾಗೂ ತಾಲ್ಲೂಕಿನಲ್ಲಿ ಏನು ಅನಾಹುತ ಮಾಡಿದೆ ಅದನ್ನು ತಪ್ಪಿಸಲಿಕ್ಕೆ ನೀವು ಕ್ರಮವನ್ನು ಕೈಗೊಳ್ಳಬೇಕಾಗುತ್ತದೆ. ಆದರೆ ನೀವು ಸಮಯವನ್ನು ಕೇಳುತ್ತಿದ್ದೀರಿ, ಮಾಹಿತಿಗಳನ್ನು ತರಿಸಿಕೊಳ್ಳಬೇಕೆಂದು ಹೇಳುತ್ತಿದ್ದೀರಿ, ತರಿಸಿಕೊಳ್ಳಿ. ಆದರೆ ನಮ್ಮಲ್ಲಿ ಏನಾಗಿದೆ ಎಂದರೆ, ನಿನ್ನೆ ಸಬ್ಜಕ್ಟ್ ಡಿಸ್‌ಕಸ್ ಆಯಿತು ಮತ್ತೆ ಇವತ್ತು ಡಿಸ್‌ಕಸ್ ಮಾಡುವುದಕ್ಕಾಗುವುದಿಲ್ಲ, ಟೈಮ್ ಇಲ್ಲ, ಬಜೆಟ್ ಸೆಷನ್ 31ನೇ ತಾರೀಖಿನೊಳಗಡೆ ಆಗಿಬಿಡಬೇಕು, ಇಂತಹ ವಿತ್ತಂಡವಾದವನ್ನು ಇಡಬಾರದೆಂದು ನಾನು ತಮ್ಮಲ್ಲಿ ಮನವರಿಕೆ ಮಾಡಿಕೊಳ್ಳುತ್ತಿದ್ದೇನೆ. ನಾಳೆ ಇದರ ಬಗ್ಗೆ ತಾವು ಡಿಸ್‌ಕಷನ್‌ಗೆ ಅವಕಾಶ ಕೊಡುವುದಾದಲ್ಲಿ, ತಾವು ಮಾಹಿತಿಯನ್ನು ತರಿಸಿಕೊಳ್ಳುವವರೆಗೂ ಸಹಿತ ನಾವು ತಾಳ್ಮೆಯನ್ನು ಕಳೆದುಕೊಳ್ಳುವುದಕ್ಕೆ ಹೋಗುವುದಿಲ್ಲ. ನಾವು ವಿರೋಧ ಪಕ್ಷದವರು ಸಹಕಾರವನ್ನು ಕೊಡುತ್ತೇವೆ. It should be debated tomorrow. ತಾವು ಇದಕ್ಕೆ ಒಪ್ಪಿಕೊಳ್ಳಬೇಕಾಗುತ್ತದೆ.

ಉಪಾಧ್ಯಕ್ಷರು:– ನಾವು ಅವಕಾಶವನ್ನು ಕೊಡಬೇಕಾಗುತ್ತದೆ; ಸರ್ಕಾರ ವರದಿಯನ್ನು ತರಿಸಿಕೊಳ್ಳಬೇಕಾಗುತ್ತದೆ.

ಶ್ರೀ ಜಗದೀಶ್ ಶೆಟ್ಟರ್(ವಿರೋಧ ಪಕ್ಷದ ನಾಯಕರು):– ಮಾನ್ಯ ಉಪಾಧ್ಯಕ್ಷರೆ, ಅವರು ವರದಿಯನ್ನು ತರಿಸಿಕೊಳ್ಳಲಿ, ಆಮೇಲೆ ಡಿಸ್‌ಕಷನ್‌ಗೆ ಅವಕಾಶವನ್ನು ಕೊಡಬೇಕು.

ಶ್ರೀ ಮಲ್ಲಿಕಾರ್ಜುನ ಖರ್ಗೆ(ಮಾನ್ಯ ಗೃಹ ಮತ್ತು ಸಣ್ಣ ನೀರಾವರಿ ಸಚಿವರು):– ಮಾನ್ಯ ಉಪಾಧ್ಯಕ್ಷರೆ, ನಾನು ಹೇಳಿಕೆಯನ್ನು ಕೊಟ್ಟಮೇಲೆ, ಅದರ ಮೇಲೆ ಮಾತನಾಡಲು ಅವಕಾಶ ಇದ್ದೇ ಇದೆ. ನಾವು ಏನೂ ಮುಚ್ಚಬೇಕೆಂದು ಇಲ್ಲ.

ಶ್ರೀ ಕಾಗೋಡು ತಿಮ್ಮಪ್ಪ:– ನೀವು ಏಕೆ ಉಹಾಪೋಹ ಮಾಡುತ್ತೀರಿ?

ಶ್ರೀ ಪಿ.ಜಿ.ಆರ್. ಸಿಂಧ್ಯ:– ಮಾನ್ಯ ಕಾಗೋಡು ತಿಮ್ಮಪ್ಪನವರು ಅತ್ಯಂತ ಹಿರಿಯ ಸದಸ್ಯರು, ಸಮಾಜವಾದಿ ಚಳುವಳಿಯಿಂದ ಬಂದವರು, ನಾನು ನಿನ್ನೆ ರಾತ್ರಿಯಲ್ಲಾ ಇವರನ್ನು ನಾನು ನೆನೆಸಿಕೊಂಡಿರುತ್ತೇನೆ. ಶ್ರೀ ವೆಂಕಟರಾಮನ್‌ರವರು ದಿವಂಗತರಾಗಿದ್ದಾರೆ, ಅವರ ಜೊತೆಯಲ್ಲಿ ಇವರು ಹೋರಾಟ ಮಾಡಿದವರು ಎಂದು ಹೇಳಿ ಇವರು ಮಂತ್ರಿಗಳಾದ ಮೇಲೆ ಏಕೆ ಇರಿಟೇಟ್ ಆಗುತ್ತಾರೋ ಅರ್ಥವಾಗುವುದಿಲ್ಲ. What is that I have asked? Four people have died. Another four people are going to die. ನ್ಯಾಷನಲ್ ಹೈವೇನಲ್ಲಿ ರಕ್ತ ಸುರಿಯುತ್ತದೆ. ನಾವು ಇಲ್ಲಿ ಸುಮ್ಮನೆ ಕುಳಿತುಕೊಳ್ಳುವುದಕ್ಕಾಗುತ್ತದೆಯೇ? ಇಲ್ಲಿ ಪ್ರಸ್ತಾಪ ಮಾಡಬಾರದಾ? What is it? A socialist, a fighter like you, should not respond like this.

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು):– ಮಾನ್ಯ ಉಪಾಧ್ಯಕ್ಷರೆ, ಝಳಕಿ ವಿಷಯವನ್ನು ನಾವು ಮೊನ್ನೆ ಪ್ರಸ್ತಾಪ ಮಾಡಿದಾಗ, ಅಲ್ಲಿ ಅನಾಹುತ ಆಯಿತು, ಹಾಗೆ ಪ್ರಸ್ತಾಪ ಮಾಡುವ ಸಂದರ್ಭದಲ್ಲಿ ಏನೇನು ಆಯಿತು ಎನ್ನುವುದು ತಮಗೆ ಗೊತ್ತಿದೆ, ಒಂದು ತಾಸಿನವರೆಗೆ ಜ್ಯುಡಿಷಿಯಲ್ ಎನ್‌ಕ್ವೈರಿ ಬಗ್ಗೆ ಚರ್ಚೆ ಮಾಡಬೇಕೋ ಬೇಡವೋ ಎಂದು ಆಯಿತು. ಇಂತಹ ಗಂಭೀರವಾದ ವಿಷಯಗಳು ಇದ್ದಾಗ ಸರ್ಕಾರ ಕೋ-ಆಪರೇಟ್ ಮಾಡಬೇಕಾಗುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವಾರ್ತಾ ಸಚಿವರು):– ಮಾನ್ಯ ಉಪಾಧ್ಯಕ್ಷರೆ, ಸರ್ಕಾರ ಕೋ-ಆಪರೇಟ್ ಮಾಡುತ್ತಿದೆ, ನಿಮಗೆ ಅನುಮಾನ ಬರುವುದಕ್ಕೆ ಅವಕಾಶವೇ ಇಲ್ಲ, ಏಕೆಂದರೆ ನಾವು ಆ ರೀತಿಯಾಗಿ ನಡೆದುಕೊಳ್ಳಲಿಲ್ಲ; ಆ ಬಗ್ಗೆ ಹೇಳಿಕೆಯನ್ನು ಕೊಟ್ಟಾದ ಮೇಲೆ ಚರ್ಚೆಗೆ ಅವಕಾಶ ಇದೆ, ಈಗಲೇ ಏಕೆ ಆತುರ ಮಾಡುತ್ತೀರಿ ಎಂದು ಹಾಗೂ ಗುಮಾನಿ ಮೇಲೆ ಏಕೆ ಮಾಡುತ್ತೀರೆಂದು ಹೇಳಿದೆ ಅಷ್ಟೇ.

ಶ್ರೀ ಪಿ.ಜಿ.ಆರ್.ಸಿಂಧ್ಯಾ:– ಮಾನ್ಯ ಉಪಾಧ್ಯಕ್ಷರೆ, ಈಗ ಅಲ್ಲಿ ಸತ್ತಿರುವುದು ಗುಮಾನಿ ಅಲ್ಲ, ಸತ್ತಿರತಕ್ಕಂಥಾದ್ದು ನಿಜ, ಪೋಲೀಸ್ ಫೋರ್ಸ್ ಫೈಲ್ಯೂರ್ ಆಗಿದ್ದು ನಿಜ, ಫೈರಿಂಗ್ ಆಗಿದ್ದು ನಿಜ, ನೀವು ಪರ್ಮಿಷನ್ ಕೊಟ್ಟಿರುವುದು ನಿಜ, ಅಜಿಟೇಷನ್ ಮಾಡುತ್ತಿರುವುದು ನಿಜ, ಎರಡು ತಿಂಗಳಿಂದ ಪೋಲೀಸ್ ಇಂಟಲಿಜೆನ್ಸ್ ರಿಪೋರ್ಟ್ ಸರ್ಕಾರಕ್ಕೆ ಬಂದಿರುವ ಬಗ್ಗೆ ನನ್ನ ಹತ್ತಿರ ಪುರಾವೆಗಳು ಇವೆ. ಇನ್ನು ಏನು ಬೇಕು ನಿಮಗೆ? ನಾನು ಏನು ಹೇಳುತ್ತಿದ್ದೇನೆಂದರೆ, ಆ ಇನ್ಸಿಡೆಂಟ್ ಬಗ್ಗೆ ಮಾನ್ಯ ಗೃಹ ಸಚಿವರು ಡೀಟೇಲ್ಸ್ ತರಿಸಿಕೊಳ್ಳುತ್ತೇವೆಂದು ಹೇಳುತ್ತಿದ್ದಾರೆ, ನಾನು ಚೇರ್‌ಗೆ ಅಪೀಲ್ ಮಾಡಿಕೊಳ್ಳುತ್ತಿದ್ದೇನೆ, ನಾನು ಹೇಳುತ್ತೇನೆ ಕೇಳಿ, ಇತ್ತಿತ್ತಲಾಗಿ ನಮ್ಮ ಅಪೀಲ್‌ಗೆ ಮೂರು ಕಾಸಿನ ಮರ್ಯಾದೆ ಇಲ್ಲ ಸ್ವಾಮಿ, ಯಾರಾಗ ಗೌವರ್ನಮೆಂಟ್‌ಗೆ ಎಂಬರ್ಯಾಸ್‌ಮೆಂಟ್ ಆಗುತ್ತದೆ, ಯಾವಾಗ ಗೌವರ್ನಮೆಂಟಿನಲ್ಲಿ ಫೈಲ್ಯೂರ್ ಆಗಿರುತ್ತದೆ, ಆದನ್ನು ನಾವು ಎತ್ತಿ ಹಿಡಿಯಬೇಕೆಂದು ಹೇಳಿದಾಗ, ಹೌಸ್ ಅಡ್ಜರ್ನ್ ಆಗಿ ಹೋಗಿಬಿಡುತ್ತದೆ. ಇವೆಲ್ಲವನ್ನೂ

ನಾವು ಅನುಭವಿಸುತ್ತಿದ್ದೇವೆ. ಆದ್ದರಿಂದ this is a very important matter. Tomorrow, I submit, ... ನಮಗೆ ಅವಕಾಶವನ್ನು ಮಾಡಿಕೊಡಬೇಕು. ಡಿಮಾಂಡ್ ಬಗ್ಗೆ ಮಾತನಾಡಿ ಎಂದು ಹೇಳುತ್ತಾರೆ, ಏನು ಡಿಮಾಂಡ್ ಬಗ್ಗೆ ಮಾತನಾಡುವುದು? ಡಿಮಾಂಡ್ ಬಂದಾಗ ನಾವು ಮಾತನಾಡಬೇಕೆ?

ಉಪಾಧ್ಯಕ್ಷರು:- ನಾಳೆ ಮಾನ್ಯ ಸಚಿವರು ಸ್ಟೇಟ್‌ಮೆಂಟ್ ಕೊಡುತ್ತಾರೆ, ಆಮೇಲೆ ನಿಮ್ಮದು ಏನು ಇದೆ ಚರ್ಚೆ ಮಾಡಿ.

ಶ್ರೀ ಪಿ.ಜಿ.ಆರ್. ಸಿಂಧ್ಯಾ:- ಮಾನ್ಯ ಉಪಾಧ್ಯಕ್ಷರೆ, ನಾವು ನಿನ್ನೆ ಅಥವಾ ಇವತ್ತಿನ ದಿವಸ ಅಸೆಂಬ್ಲಿಗೆ ಬಂದವರು ಅಲ್ಲ, ಈ ಮಹಾನ್ ನಾಯಕರುಗಳು ವಿರೋಧ ಪಕ್ಷದ ಸ್ಥಾನದಲ್ಲಿ ಕುಳಿತಾಗ ಫೈರಿಂಗ್ ಆದಾಗ ಏನೇನು ಆಗಿದೆ ಎನ್ನುವುದು ನಮಗೂ ಸಹಿತ ಗೊತ್ತಿದೆ. ಆದರೆ ನಾವು ಆ ರೀತಿಯಾಗಿ ನಡೆದುಕೊಳ್ಳುವುದಕ್ಕೆ ತಯಾರಿಲ್ಲ, ಮೈಕ್ ಮುರಿದು ಹಾಕಿರುವುದು ನನಗೆ ಗೊತ್ತಿದೆ. ಯಾರು ಎನ್ನುವುದು ಮಾನ್ಯ ಕಾಗೋಡು ತಿಮ್ಮಪ್ಪನವರೇ, ನಿಮಗೆ ಗೊತ್ತಿದೆ. ಎಲ್ಲಾ ವಿಷಯಾಂತರ ಮಾಡಬೇಡಿ, ಈ ಸರ್ಕಾರಕ್ಕೆ ಮೂರು ಕಾಸಿನ ಮರ್ಯಾದೆ ಇದ್ದರೆ ಹೇಳಿ, ಇಲ್ಲಿ ರಾಜಕೀಯ ಮಾಡುವುದಕ್ಕೆ ಹೊರಟಿದ್ದೀರಿ, ನಾರು ಸರ್ಕಾರದ ಧೋರಣೆಯನ್ನು ಪ್ರತಿಭಟಿಸಿ ಧರಣಿಯನ್ನು ಮಾಡುತ್ತೇವೆ.

(ಈ ಹಂತದಲ್ಲಿ ಜನತಾದಳದ (ಯು) ಸದಸ್ಯರು ಸದನದ ಬಾವಿಗೆ ಬಂದರು)

3.50 ಪಿಎಂ.

(ಗೊಂದಲ)

ಉಪಾಧ್ಯಕ್ಷರು:- ಆದಂತಹ ಘಟನೆಯ ಬಗ್ಗೆ ಸವಿಸ್ತಾರವಾದ ವರದಿಯನ್ನು ತರಿಸಿಕೊಂಡು ನಾಳೆ ಹೇಳಿಕೆಯನ್ನು ಕೊಡಲಾಗುವುದು ಎಂದು ಸರ್ಕಾರ ಹೇಳಿದೆ, ಚರ್ಚೆ ಮಾಡಲು ಕೂಡ ತಮಗೆ ಅವಕಾಶವಿದೆ; ಇಲ್ಲಿ ಧರಣಿ ಮಾಡುವುದು ಸೂಕ್ತವಲ್ಲ.

ಶ್ರೀ ಜಗದೀಶ್ ಶೆಟ್ಟರ್(ವಿರೋಧ ಪಕ್ಷದ ನಾಯಕರು):- ಮಾನ್ಯ ಉಪಾಧ್ಯಕ್ಷರೆ, ಸರ್ಕಾರದ ನಡೆವಳಿಕೆ ಹೇಗಿದೆ ಎಂದರೆ ಆ ಝಳಕಿ ಘಟನೆಯಾದ ಮೇಲೆ ತಕ್ಷಣ ಕ್ರಮ ಕೈಗೊಂಡಿದ್ದರೆ ಇಂತಹ ಘಟನೆಗಳು ಪುನರಾವರ್ತನೆಯಾಗುತ್ತಿರಲ್ಲಿಲ್ಲವೆಂದು ಅವತ್ತೇ ನಾವು ಹೇಳಿದ್ದೇವೆ. ಇವತ್ತು ಪೋಲೀಸ್ ವ್ಯವಸ್ಥೆಯ ಬಗ್ಗೆ ವಿಶ್ವಾಸವನ್ನು ಜನತೆ ಕಳೆದುಕೊಳ್ಳುತ್ತಿದ್ದಾರೆ. ಆ ರೀತಿಯಾದ ವಾತಾವರಣ ಇವತ್ತು ನಿರ್ಮಾಣವಾಗಿದೆ. ಯಾವ ಅಧಿಕಾರಿ ತಪ್ಪು ಮಾಡಿದ್ದಾರೆ ಅವರ ಮೇಲೆ ಏನೂ ಕ್ರಮ ಕೈಗೊಳ್ಳಲು ಆಗುತ್ತಿಲ್ಲ; ಆದುದರಿಂದ ಇಂತಹ ಘಟನೆಗಳು ಪುನರಾವರ್ತನೆಯಾಗುತ್ತಿವೆ.

ಉಪಾಧ್ಯಕ್ಷರು:- ನಾನು ನಿಮಗೆ ಮಾತನಾಡಲು ಅವಕಾಶ ಕೊಡುವುದಿಲ್ಲವೆಂದು ಹೇಳುವುದಿಲ್ಲ, ಸರ್ಕಾರ ಹೇಳಿಕೆ ಕೊಡುವವರೆಗೆ ನಾವು ಕಾಯಬೇಕಾಗುತ್ತದೆ. ಚರ್ಚೆಗೆ ಅವಕಾಶ ಕೊಡುತ್ತೇವೆಂದು ಹೇಳಿದಮೇಲೂ ಹೀಗೆ ಮಾಡಿದರೆ ಹೇಗೆ?

ಶ್ರೀ ಜಗದೀಶ್ ಶೆಟ್ಟರ್:- ಮೊನ್ನೆ ಝಳಕಿ ಪ್ರಕರಣಕ್ಕೆ ಸಂಬಂಧಪಟ್ಟಂತೆ ಆ ಚರ್ಚೆ ಬೇಡವೆಂದು ಸಭಾಧ್ಯಕ್ಷರು ರೂಲಿಂಗ್ ಕೊಡುವಂತಹ ಪ್ರಸಂಗ ಬಂತು. ಅಂದರೆ ಸರ್ಕಾರಕ್ಕೆ ಯಾವಾಗ ಮುಜುಗರವಾಗುತ್ತದೆ ಅದರಿಂದ ತಪ್ಪಿಸಿಕೊಳ್ಳುವಂತಹ ಎಲ್ಲಾ ಪ್ರಯತ್ನಗಳನ್ನು

ಮಾಡುತ್ತಿದ್ದಾರೆ. ಮೊನ್ನೆ ಮಾನ್ಯ ಶಿವಾನಂದ ಪಾಟೀಲರು ಆ ಪ್ರಕರಣದ ಬಗ್ಗೆ ಒಂದೆರಡು ಸ್ಪಷ್ಟೀಕರಣವನ್ನು ಕೇಳುತ್ತೇನೆಂದರೆ ಅವಕಾಶವನ್ನು ಕೊಡಲಿಲ್ಲ. ಮಾನ್ಯ ಗೃಹಮಂತ್ರಿಗಳು ಸದನಕ್ಕೆ ಬಂದು ಕುಳಿತಾಗ ಮಾನ್ಯ ಶಿವಾನಂದ ಪಾಟೀಲರು ಸ್ಪಷ್ಟನೆ ಕೇಳುವುದಕ್ಕೆ ಸಹಕಾರ ಮಾಡಲಿಲ್ಲ.

ಉಪಾಧ್ಯಕ್ಷರು:- ಮಾನ್ಯ ಶಿವಾನಂದ ಪಾಟೀಲರು ಮಾತನಾಡುವಾಗ ಸಾಕಷ್ಟು ಅವಕಾಶವನ್ನು ಕೊಡಲಾಗಿದೆ.

ಶ್ರೀ ಜಗದೀಶ್ ಶೆಟ್ಟರ್:- ಅವರಿಗೆ ಅವಕಾಶ ಕೊಡಲಿಲ್ಲ, ಝಳಕಿ ಪ್ರಕರಣದಲ್ಲಿ ಗೋಲಿಬಾರ್ ಆದ ಸಂದರ್ಭದಲ್ಲಿ 3 ಗಂಟೆಗೆ ಸದನ ಸೇರಿದಮೇಲೆ ಶಿವಾನಂದ ಪಾಟೀಲರ ಪರರಾಗಿ ಮಾನ್ಯ ಸಿಂಧ್ಯಾರವರು, ನಾವು ಎಲ್ಲರೂ ಮಾತನಾಡಿದ್ದೇವೆ, ಆಗ ಶಿವಾನಂದಪಾಟೀಲರು ಕೆಲವೊಂದು ಸ್ಪಷ್ಟೀಕರಣ ಕೇಳುತ್ತಾರೆ, ಅವಕಾಶ ಮಾಡಿಕೊಡಿ ಎಂದು ಸಭಾಧ್ಯಕ್ಷರನ್ನು ಕೇಳಿದಾಗ ಸಭಾಧ್ಯಕ್ಷರು ಖರ್ಗೆಯವರ ಮುಖವನ್ನು ಅವರು ಏನು ಹೇಳುತ್ತಾರೆಂದು ನೋಡಿದರು. ಆ ಇಲಾಖೆಗೆ ಸಂಬಂಧಪಟ್ಟಂತೆ ಬೇಡಿಕೆಯ ಮೇಲೆ ಮಾತನಾಡುವಾಗ ಮಾತನಾಡಿ ಎಂದು ಹೇಳಿದರು. ಇಂತಹ ಘಟನೆಗಳು ನಡೆದಾಗ ಸರ್ಕಾರ ಬೇಜವಾಬ್ದಾರಿಯಿಂದ ನಡೆದುಕೊಂಡಾಗ ಇಂತಹ ಘಟನೆಗಳ ಪುನರಾವರ್ತನೆಗಳಾಗುತ್ತಿವೆ. ಹೀಗಾಗಿ ಇವತ್ತು ಆ ಝಳಕಿ ಪ್ರಕರಣಕ್ಕೆ ಸಂಬಂಧಿಸಿದಂತೆ ಕ್ರಮ ಕೈಗೊಂಡು ಆ ಎಸ್‌ಪಿಯನ್ನು ವರ್ಗಾವಣೆ ಮಾಡಬಹುದಾಗಿತ್ತು, ಅವರು ಇನ್ನು ಅಲ್ಲಿಯೇ ಇದ್ದಾರೆ, ಸಿಓಡಿ ತನಿಖೆ ಬೇಡ, ಸಿಬಿಐ ತನಿಖೆಯನ್ನು ಮಾಡಿ ಎಂದು ಒತ್ತಾಯ ಮಾಡಿದೆವು; ಅದಕ್ಕೆ ಸರ್ಕಾರ ಒಪ್ಪಲಿಲ್ಲ, ಸರ್ಕಾರ ಯಾವುದಕ್ಕೂ ಸ್ಪಂದಿಸುತ್ತಿಲ್ಲ. ಇವತ್ತು ಬೇಜವಾಬ್ದಾರಿಯಿಂದ ಸರ್ಕಾರ ನಡೆದುಕೊಳ್ಳುತ್ತಿದೆ; ಇದರಿಂದಾಗಿ ಇವತ್ತು ಇಂತಹ ಅನಾಹುತಗಳು ಗೃಹ ಇಲಾಖೆಯಿಂದ ನಡೆಯುತ್ತಿದೆ. ಅದಕ್ಕಾಗಿ ತಕ್ಷಣ ಸರ್ಕಾರದವರು ಈ ಬಗ್ಗೆ ಏನಾದರೂ ಹೇಳುವಂಥದ್ದಾಗಬೇಕು ಮತ್ತು ಯಾರು ತಪ್ಪು ಮಾಡಿದ್ದಾರೆ ಅವರ ಮೇಲೆ ಕ್ರಮವನ್ನು ತೆಗೆದುಕೊಳ್ಳಬೇಕು; ಇದಕ್ಕೆ ಸರ್ಕಾರ ಒಪ್ಪಿಕೊಳ್ಳಬೇಕು.

(ಗೊಂದಲ)

ಶ್ರೀ ಕಾಗೋಡು ತಿಮ್ಮಪ್ಪ(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):- ಯಾವುದೋ ವಿಚಾರವನ್ನು ತೆಗೆದುಕೊಂಡು ಯಾವುದಕ್ಕೋ ಜೋಡಿಸುತ್ತಿದ್ದಾರೆ.

ಶ್ರೀ ಜಗದೀಶ್ ಶೆಟ್ಟರ್:- ಝಳಕಿ ಪ್ರಕರಣಕ್ಕೆ ಸಂಬಂಧಿಸಿದಂತೆ ಸರಿಯಾಗಿ ಚರ್ಚೆಯಾಗಲಿಲ್ಲ, ತಪ್ಪಿತಸ್ಥ ಅಧಿಕಾರಿಯ ಮೇಲೆ ಕ್ರಮ ಕೈಗೊಂಡಿದ್ದರೆ ಈ ಅನಾಹುತವಾಗುತ್ತಿರಲಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ:- ಚರ್ಚೆಗೆ ಅವಕಾಶವನ್ನು ಮಾಡಿಕೊಡುವವರು ಅಧ್ಯಕ್ಷರು, ಅದರ ಉಪಯೋಗವನ್ನು ಮಾಡಿಕೊಳ್ಳಿರಿ.

ಶ್ರೀ ಕೆ.ವಿಶ್ವೇಶ್ವರ ಹೆಗಡೆ:- ಇವತ್ತು ಆಗಿರುವ ಘಟನೆ- ಈ ಸರ್ಕಾರದ ಒಳಜಗಳದ ಪ್ರತೀಕವೆಂದು ಜನರು ಮಾತನಾಡಿಕೊಳ್ಳುತ್ತಿದ್ದಾರೆ.

ಶ್ರೀ ಜಗದೀಶ್ ಶೆಟ್ಟರ್:- ಸರ್ಕಾರದ ಈ ಮನೋಭಾವನೆಯನ್ನು ನಾವು ಪ್ರತಿಭಟಿಸುತ್ತಿದ್ದೇವೆ.

(ಈ ಸಂದರ್ಭದಲ್ಲಿ ಬಿಜೆಪಿ ಸದಸ್ಯರು ಸದನದ ಬಾವಿಗೆ ಬಂದರು)

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ(ಗೃಹ ಮತ್ತು ಸಣ್ಣ ನೀರಾವರಿ ಸಚಿವರು):- ನಾಳೆ ಹೇಳಿಕೆ ಕೊಟ್ಟಮೇಲೆ ಚರ್ಚೆ ಮಾಡಬಹುದೆಂದು ಹೇಳಿದೆ, ನಾನು ಆಥೆಂಟಿಕ್ಯಾಗಿ ವಿವರವನ್ನು ತರಿಸಿಕೊಂಡು ಹೇಳಿಕೆಯನ್ನು ಕೊಡುವುದು ಒಳ್ಳೆಯದೆಂಬ ದೃಷ್ಟಿಯಿಂದ ಹೇಳಿದೆ; ಅದಕ್ಕೆ ಅವರೂ ಕೂಡ ಒಪ್ಪಿಕೊಂಡರು, ಒಪ್ಪಿಕೊಂಡು ನಂತರ ಈ ರೀತಿಯಾಗಿ ಸನ್ನಿವೇಶವನ್ನು ಸೃಷ್ಟಿ ಮಾಡುವುದು ಯಾರಿಗೂ ಭೂಷಣವಲ್ಲ. ಅದಕ್ಕೆ ನಾನು ಅಪೀಲ್ ಮಾಡಿಕೊಳ್ಳುತ್ತಿದ್ದೇನೆ. ನಾನು ನಾಳೆ ಹೇಳಿಕೆ ಕೊಟ್ಟಮೇಲೆ ಅವರು ಚರ್ಚೆ ಮಾಡಲಿ, ಪುನಃ ಸಂಶಯವಿದ್ದರೆ ಕೇಳಲಿ, ಅದಕ್ಕಾಗಿ ನಾನು ಮಾನ್ಯ ಸಿಂಧ್ಯಾರವರಿಗೆ ಮಾನ್ಯ ಭೈರೇಗೌಡರಿಗೆ, ಮಾನ್ಯ ಜಗದೀಶ್ ಶೆಟ್ಟರ್‌ರವರಿಗೆ ಅವರವರ ಸ್ಥಾನಕ್ಕೆ ತೆರಳಿ ಪರಿಣಾಮಕಾರಿಯಾಗಿ ಮಾತನಾಡಲಿ ಎಂದು ನಾನು ರಿಕ್ವೆಸ್ಟ್ ಮಾಡಿಕೊಳ್ಳುತ್ತೇನೆ. ಯಾವ ರೀತಿಯಾಗಿ ವಾದ ವಿವಾದ ಮಾಡಬೇಕೆಂಬುದೆಲ್ಲಾ ಅವರ ಕೈಯಲ್ಲಿದೆ, ಆದುದರಿಂದ ಈ ರೀತಿಯ ಸನ್ನಿವೇಶವನ್ನು ಸೃಷ್ಟಿ ಮಾಡುವುದು ಭೂಷಣವಲ್ಲ.

ಉಪಾಧ್ಯಕ್ಷರು:-ಸನ್ಮಾನ್ಯ ಸದಸ್ಯರೆಲ್ಲರಲ್ಲೂ ನಾನು ಮನವಿ ಮಾಡಿಕೊಳ್ಳುತ್ತೇನೆ, ಈಗಾಗಲೇ ಸನ್ಮಾನ್ಯ ಗೃಹ ಸಚಿವರು ಎಲ್ಲಾ ವರದಿಯನ್ನು ಸಂಪೂರ್ಣವಾಗಿ ತರಿಸಿಕೊಂಡು ನಾಳೆ ಸದನದಲ್ಲಿ ನಾನು ಹೇಳಿಕೆ ಕೊಡುತ್ತೇನೆಂದು ಹೇಳಿದ್ದಾರೆ, ಮತ್ತೆ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡುವುದಿಲ್ಲವೆಂಬ ಪ್ರಶ್ನೆಯೇ ಇಲ್ಲ. ಈಗ ತಾವೇ ಹೆಚ್ಚು ಕಡಿಮೆ ಒಪ್ಪಿಕೊಂಡಿದ್ದೀರಿ, ನಾಳೆ ಹೇಳಿಕೆ ಮಾಡಲಿ ಎಂಬ ಮಾತನ್ನು ಹೇಳಿದ್ದೀರಿ, ಆದ್ದರಿಂದ ನಾನು ತಮ್ಮಲ್ಲಿ ವಿನಂತಿಯನ್ನು ಮಾಡಿಕೊಳ್ಳುತ್ತೇನೆ, ನಾಳೆ ಸರ್ಕಾರ ಹೇಳಿಕೆ ಮಾಡುವುದಕ್ಕೆ ಅವಕಾಶವನ್ನು ಮಾಡಿಕೊಡಬೇಕು, ಅದು ಮುಗಿದ ನಂತರ ಮಾತನಾಡುವುದಕ್ಕೆ ಅವಕಾಶ ಮಾಡಿಕೊಳ್ಳುತ್ತೇವೆ, ಇದರಲ್ಲಿ ಬೇರೆ ವಿಚಾರಗಳಿಲ್ಲ. ದಯವಿಟ್ಟು ಮಾನ್ಯ ಸದಸ್ಯರುಗಳು ತಮ್ಮ ತಮ್ಮ ಸ್ಥಾನಗಳಿಗೆ ತೆರಳಬೇಕೆಂದು ವಿನಂತಿಯನ್ನು ಮಾಡಿಕೊಳ್ಳುತ್ತೇನೆ. ಹಿರಿಯೂರಿನಲ್ಲಿ ಇಂತಹ ಗಂಭೀರವಾದ ಘಟನೆ ನಡೆದಿದೆ ಎಂದು ತಾವು ಪ್ರಸ್ತಾಪ ಮಾಡಿದ್ದೀರಿ. ಆ ಪ್ರಸ್ತಾಪದ ಹಿನ್ನೆಲೆಯಲ್ಲಿ ಮಾನ್ಯ ಗೃಹಸಚಿವರು ವಿವರವಾದ ವರದಿಯನ್ನು ತರಿಸಿಕೊಂಡು ಹೇಳಿಕೆಯನ್ನು ಸದನದಲ್ಲಿ ಮಾಡುತ್ತೇನೆ ಎಂದು ಹೇಳಿದ್ದಾರೆ. ಅದಕ್ಕೆ ಸಮಯಾವಕಾಶ ಬೇಕೆಂದು ಕೇಳಿದ್ದಾರೆ, ನಾಳೆ ಸವಿಸ್ತಾರವಾದ ವರದಿಯನ್ನು ಸದನದ ಮುಂದಿಡುತ್ತೇನೆಂದು ಹೇಳಿದ್ದಾರೆ, ನಾಳೆ ಚರ್ಚೆಗೆ ಕೂಡ ಅವಕಾಶವಿದೆ, ಅವರ ಹೇಳಿಕೆಯಿಂದ ನಿಮಗೆ ತೃಪ್ತಿಯಾಗದಿದ್ದರೆ ನಿಮ್ಮ ವಿಚಾರ ಏನಿದ್ದರೂ ಕೂಡ ನಾಳೆ ಮಂಡಿಸಬಹುದು. ಆದುದರಿಂದ ತಾವು ತಮ್ಮ ತಮ್ಮ ಸ್ಥಾನಗಳಿಗೆ ತೆರಳಿ ಸದನ ಕಲಾಪ ಸುಗಮವಾಗಿ ನಡೆಯಲು, ಅವಕಾಶವನ್ನು ಮಾಡಿಕೊಡಬೇಕೆಂದು ತಮ್ಮಲ್ಲಿ ಮತ್ತೊಮ್ಮೆ ಮನವಿ ಮಾಡಿಕೊಳ್ಳುತ್ತೇನೆ. ಈಗ ಸದನವನ್ನು 15 ನಿಮಿಷಗಳ ಕಾಲ ಮುಂದೂಡುತ್ತಿದ್ದೇನೆ.

(ಸದನವು 3 ಗಂಟೆ 59, ನಿಮಿಷಕ್ಕೆ ಮುಂದೂಡಲ್ಪಟ್ಟು ಮತ್ತೆ 15 ನಿಮಿಷಗಳ ನಂತರ ಸಮಾವೇಶಗೊಳ್ಳಲು ನಿರ್ಧರಿಸಿತು)

(ಸದನವು ಸಂಜೆ 5 ಗಂಟೆ 57 ನಿಮಿಷಕ್ಕೆ ಮತ್ತೆ ಪುನರ್ ಸಮಾವೇಶಗೊಂಡಿತು. ಅಧ್ಯಕ್ಷರು (ಶ್ರೀ ಎಂ.ವಿ. ವೆಂಕಟಪ್ಪನವರು) ಅಧ್ಯಕ್ಷ ಪೀಠವನ್ನಲಂಕರಿಸಿದರು.)

(ವಿರೋಧ ಪಕ್ಷದ ಎಲ್ಲಾ ಸದಸ್ಯರುಗಳು ಬಾವಿಯಲ್ಲಿ ಧರಣಿ ನಿರತರಾಗಿದ್ದು ಪೋಲೀಸ್ ದೌರ್ಜನ್ಯಕ್ಕೆ ಧಿಕ್ಕಾರ, ಗೋಲಿಬಾರ್ ಮಾಡಿಸುವ ಸರ್ಕಾರಕ್ಕೆ ಧಿಕ್ಕಾರ, ರೈತ ವಿರೋಧಿ ಸರ್ಕಾರಕ್ಕೆ ಧಿಕ್ಕಾರವೆಂದು ಸರ್ಕಾರದ ವಿರುದ್ಧವಾಗಿ ಘೋಷಣೆ ಕೂಗುತ್ತಿದ್ದರು)

ಅಧ್ಯಕ್ಷರು:– ತಾವು ದಯವಿಟ್ಟು ಸುಮ್ಮನಿರಬೇಕು. ಇವೊತ್ತು ಏನು ಘಟನೆ ನಡೆದಿದೆಯೋ ಆ ವಿಷಯದ ಬಗ್ಗೆ ಸದನದಲ್ಲಿ ಚರ್ಚೆ ಮಾಡೋಣ. ಸರ್ಕಾರದವರು ಉತ್ತರ ಕೊಡುತ್ತಾರೆ. ಆಮೇಲೆ ಕೂಡ ಚರ್ಚೆ ಮಾಡೋಣ. ದಯವಿಟ್ಟು ಎಲ್ಲಾ ಪಕ್ಷದ ನಾಯಕರಲ್ಲಿ ನನ್ನ ವಿನಂತಿಯೆಂದರೆ, ಎಲ್ಲರೂ ತಮ್ಮ ತಮ್ಮ ಸ್ಥಾನಗಳಿಗೆ ಹೋಗಬೇಕು. ಇಂದು ಸಂಜೆ 6-00 ಗಂಟೆಗೆ ಗ್ರಂಥಾಲಯ ಸಮಿತಿ ವತಿಯಿಂದ ಪುಸ್ತಕಗಳನ್ನು ಬಿಡುಗಡೆ ಮಾಡುವ ಕಾರ್ಯಕ್ರಮವನ್ನು ಇಟ್ಟುಕೊಳ್ಳಲಾಗಿದೆ. ದಯವಿಟ್ಟು ತಾವೆಲ್ಲಾ ಇದಕ್ಕೆ ಒಪ್ಪಿಕೊಳ್ಳಬೇಕು. ಮಾನ್ಯ ಸದಸ್ಯರುಗಳಾದ ಸಿಂಧ್ಯಾರವರಲ್ಲಿ, ಭೈರೇಗೌಡರಲ್ಲಿ, ಜಗದೀಶ್ ಶೆಟ್ಟರ್‌ರವರಲ್ಲಿ ಹಾಗೂ ಎಲ್ಲಾ ಸದಸ್ಯರುಗಳಲ್ಲಿ ನನ್ನ ವಿನಂತಿಯೆಂದರೆ, ಎಲ್ಲರೂ ದಯವಿಟ್ಟು ತಮ್ಮ ತಮ್ಮ ಸೀಟ್‌ಗಳಲ್ಲಿ ಕುಳಿತುಕೊಳ್ಳಬೇಕು. ಚರ್ಚೆಗೆ ಅವಕಾಶ ಕೊಡುತ್ತೇನೆಂದು ಹೇಳಿದ ಮೇಲೆ ಇನ್ನೇನಿದೆ?

(ಧರಣಿನಿರತ ವಿರೋಧ ಪಕ್ಷದ ಎಲ್ಲಾ ಸದಸ್ಯರುಗಳು ಅಧ್ಯಕ್ಷರ ಮನವಿಯನ್ನು ಪುರಸ್ಕರಿಸಿ ಧರಣಿಯನ್ನು ಹಿಂತೆಗೆದುಕೊಂಡು ತಮ್ಮ ತಮ್ಮ ಸ್ಥಾನಗಳಿಗೆ ಹೋಗಿ ಕುಳಿತುಕೊಂಡರು)

ಅಧ್ಯಕ್ಷರು:– ಈಗ ಮೂರನೆಯ ಮಹಡಿಯಲ್ಲಿರುವ ಕಾನ್‌ಫರೆನ್ಸ್ ಹಾಲ್‌ನಲ್ಲಿ ಗ್ರಂಥಾಲಯ ಸಮಿತಿ ವತಿಯಿಂದ ಕೆಲವು ಎಮಿನೆಂಟ್ ಪಾರ್ಲಿಮೆಂಟೇರಿಯನ್‌ಗಳ ಪುಸ್ತಕ ಬಿಡುಗಡೆ ಕಾರ್ಯಕ್ರಮವನ್ನು ಇಟ್ಟುಕೊಳ್ಳಲಾಗಿದೆ. ಆದಕಾರಣ ಈಗ ಸದನವನ್ನು ನಾಳೆ ಬೆಳಿಗ್ಗೆ 10-00 ಗಂಟೆಯವರೆಗೆ ಮುಂದೂಡುತ್ತಿದ್ದೇನೆ.

(ಸದನವು ಸಂಜೆ 5 ಗಂಟೆ 59 ನಿಮಿಷಕ್ಕೆ ಮುಂದೂಡಲ್ಪಟ್ಟು ಮತ್ತೆ ದಿನಾಂಕ 26-07-2002ರ ಶುಕ್ರವಾರದಂದು ಬೆಳಿಗ್ಗೆ 10-00 ಗಂಟೆಗೆ ಸಮಾವೇಶಗೊಳ್ಳಲು ನಿರ್ಧರಿಸಿತು)

ಅನುಬಂಧ-1

ಮೂಡಬಿದ್ರೆಗೆ ರೇಷ್ಮೆ ಪ್ರದರ್ಶಕರನ್ನು ನೀಡುವ ಬಗ್ಗೆ

1283(1617) ಶ್ರೀ ಅಭಯಚಂದ್ರ.ಕೆ.(ಮೂಡಬಿದ್ರೆ) : ಮಾನ್ಯ ರೇಷ್ಮೆ ಮತ್ತು ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮೂಡಬಿದ್ರೆ ಹೋಬಳಿ ಮಂಗಳೂರು ತಾಲ್ಲೂಕಿಗೆ ಸೇರ್ಪಡೆಯಾದ ಬಳಿಕ ರೇಷ್ಮೆ ಪ್ರದರ್ಶಕರ ಹುದ್ದೆ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿರುವುದೆ?

ಆ) ಕಾರ್ಕಳ ತಾಲ್ಲೂಕಿನಿಂದ ಪ್ರದರ್ಶಕ ಹುದ್ದೆ ಆಗದಿರಲು ಕಾರಣವೇನು?

ಇ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅತೀ ಹೆಚ್ಚು ರೇಷ್ಮೆ ವ್ಯವಸಾಯ ಇರುವ ಮೂಡಬಿದ್ರೆಗೆ ರೇಷ್ಮೆ ಪ್ರದರ್ಶಕರನ್ನು ಕೂಡಲೇ ನೀಡಲಾಗುವುದೇ?

ಈ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ರೇಷ್ಮೆ ಖರೀದಿ ಕೇಂದ್ರವಿಲ್ಲದಿರುವುದರಿಂದ ರೇಷ್ಮೆ ಬೆಳೆಗಾರರಿಗೆ ಆಗುತ್ತಿರುವ ತೊಂದರೆ ಸರ್ಕಾರದ ಗಮನಕ್ಕೆ ಬಂದಿರುವುದೇ?

ಉ) ಬಂಟ್ವಾಳ ತಾಲ್ಲೂಕಿನ ಬಿ.ಸಿ. ರೋಡಿನಲ್ಲಿರುವ ಖರೀದಿ ಕೇಂದ್ರವನ್ನು ಯಾವ ಕಾರಣಕ್ಕಾಗಿ ರದ್ದುಪಡಿಸಿದೆ?

ಶ್ರೀ ಹೆಚ್.ಎಂ. ರೇವಣ್ಣ (ರೇಷ್ಮೆ ಮತ್ತು ಜವಳಿ ಸಚಿವರು):

ಅ) ಬಂದಿದೆ, ರೇಷ್ಮೆ ಪ್ರದರ್ಶಕ ಹುದ್ದೆಯನ್ನು ಕಾರ್ಕಳದಿಂದ ಮಂಗಳೂರು ವಿಸ್ತರಣಾ ಕೇಂದ್ರಕ್ಕೆ ಸ್ಥಳಾಂತರಿಸಲಾಗಿದೆ.